ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4   ಸಂಚಿಕೆ 43   ಅಕ್ಟೋಬರ್ 31, 1982   ಬೆಲೆ 60 ಪೈಸೆ

ಅಪಾಯಕಾರಿ ನಿಲುವು

ನಾಗಾಲ್ಯಾಂಡಿನ ಚುನಾವಣಾ ಪ್ರಚಾರ ಭಾಷಣದಲ್ಲಿ ಇಂದಿರಾ ಗಾಂಧಿಯವರು ಮತ್ತೆ ಹಳೇ ರಾಗವನ್ನೇ ಹಾಡಿದ್ದಾರೆ. ಕೇಂದ್ರ ಸರಕಾರದ ಪರವಾಗಿರುವ ರಾಜ್ಯಗಳಿಗೆ ಕೇಂದ್ರದಿಂದ ಅತಿ ಹೆಚ್ಚಿನ ನೆರವು ನೀಡಲಾಗುವುದು ಎಂಬ ಅವರ ಹೇಳಿಕೆ ಭಾರತ ದೇಶದ ಘಟನೆಗೆ ವಿರುದ್ಧವಾಗಿದೆ. ಅವರ ಸರ್ವಾಧಿಕಾರಿ ನಿಲುವಿಯು ಪ್ರತೀಕವಾಗಿದೆ. ದೇಶದಲ್ಲಿ ಈಗಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಲ್ಲಗಳೆಯುವ ಧೋರಣೆಯಾಗಿದೆ.

ಈ ಮುಂಚೆ ಕೂಡ ಇಂದಿರಾ ಗಾಂಧಿ ಈ ನಿಲುವೆಯನ್ನೇ ಪ್ರತಿಪಾದನೆ ಮಾಡಿದ್ದರು. ಆಗ ಎಲ್ಲ ವಿರೋಧ ಪಕ್ಷಗಳಷ್ಟೇ ಅಲ್ಲದೆ ರಾಜ್ಯಗಳಿಗೆ ಹೆಚ್ಚು ಹಕ್ಕು ಇರಬೇಕು, ರಾಜ್ಯಗಳಲ್ಲಿ ಯಾವ ಪಕ್ಷದ ಸರಕಾರವಿದ್ದರೂ ಕೂಡ ಕೇಂದ್ರ-ರಾಜ್ಯಗಳೊಳಗಿನ ಸಂಬಂಧ ಸೌಹಾರ್ದಯುತವಾಗಿರಬೇಕು ಮತ್ತು ವಿರೋಧ ಪಕ್ಷಗಳು ಆಳುವ ರಾಜ್ಯಗಳಿಗೂ ಸರಿಯಾದ ಸಹಾಯ ನೀಡಬೇಕೆಂಬ

ಸಂಪಾದಕೀಯ

ಅಭಿಪ್ರಾಯ ಹೊಂದಿದ ಸಾರ್ವಜನಿಕರೆಲ್ಲ ಇಂದಿರಾ ಗಾಂಧಿಯ ಈ ಧೋರಣೆಯನ್ನು ಬಲವಾಗಿ ವಿರೋಧಿಸಿದ್ದರು. ಈ ನೀತಿಗನುಸಾರವಾಗಿಯೇ "ಕೂಲಿಗಾಗಿ ಕಾಳು" ಯೋಜನೆಗೆ ಆಹಾರ ಧಾನ್ಯ ಒದಗಿಸಲಿಲ್ಲ, ಹಡಗು ನಿರ್ಮಾಣ ಕೇಂದ್ರ, ಥರ್ಮಲ್ ಘಟಕ ಮುಂತಾದ ಯೋಜನೆಗಳನ್ನು ಸ್ಥಾಪಿಸಲಿಲ್ಲ, ಅಭಿವೃದ್ಧಿ ಯೋಜನೆಗಳಿಗೆ ಧನ ಸಹಾಯವನ್ನೂ ಕೊಡದೆ, ಓವರ್ ಡ್ರಾಫ್ಟ್ ಪ್ರಶ್ನೆಯನ್ನೇ ದೊಡ್ಡದಾಗಿ ಮಾಡಿ ಪ. ಬಂಗಾಲದ ಸಿ. ಪಿ. ಐ. (ಎಂ) ಮುಖಂಡತ್ವದ ಎಡರಂಗ ಸರಕಾರಕ್ಕೆ ಅನ್ಯಾಯವೆಸಗಿದ್ದಾರೆ.

ಇಂದಿರಾ ಗಾಂಧಿಯ ಜನವಿರೋಧಿ ನೀತಿಗೆ ಬೇಸತ್ತ ಜನತೆ ವಿರೋಧ ಪಕ್ಷಗಳೆಡೆ ಒಲವುತೋರಿಸುತ್ತಿರುವಾಗ, ತನ್ನ ಅಧಿಕಾರದ ಗದ್ದುಗೆ ಸಡಿಲವಾಗುತ್ತಿರುವುದನ್ನು ಕಂಡ ಇಂದಿರಾ ಗಾಂಧಿ ಈ ರೀತಿಯ ಬೆದರಿಕೆ ತೋರಿಸುತ್ತಿದ್ದಾರೆ. ಎಲ್ಲ ವಿರೋಧ ಪಕ್ಷಗಳೂ, ಜನತೆಯೂ ಇಂದಿರಾ ಗಾಂಧಿಯ ಈ ನಿಲುವೆಯನ್ನು ಖಂಡಿಸಲೇಬೇಕು.

ದೇಶದ ಬಹುಭಾಗ ಕ್ಷಾಮ ಪೀಡಿತ

ಲಕ್ಷಾಂತರ ಜನತೆ ಬೇಗುದಿಯಲ್ಲಿ

ದೇಶದ 15 ರಾಜ್ಯಗಳು ಪ್ರಸಕ್ತದಲ್ಲಿ ಕ್ಷಾಮದಿಂದ, ಪ್ರವಾಹ ಮತ್ತಿತರ ನೈಸರ್ಗಿಕ ಪ್ರಕೋಪಗಳಿಂದ ಬಳಲುತ್ತಿವೆ. ದೇಶದ ಒಟ್ಟು 405 ಜಿಲ್ಲೆಗಳಲ್ಲಿ 187 ಜಿಲ್ಲೆಗಳು ಈ ತೊಂದರೆಗೀಡಾಗಿವೆ. ಪ. ಬಂಗಾಲ, ಓರಿಸ್ಸಾ, ಯು. ಪಿ., ಬಿಹಾರ್, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತಮಿಳುನಾಡು — ಈ ಏಳು ರಾಜ್ಯಗಳಲ್ಲಿ ಪರಿಸ್ಥಿತಿ ತುಂಬ ಗಂಭೀರವಾಗಿದೆ. 20 ಮಿಲಿಯನ್ ಹೆಕ್ಟಾರ್ ಭೂಮಿಯಲ್ಲಿನ ಬೆಳೆ ಡೋಲಾಯಮಾನ ಪರಿಸ್ಥಿತಿಯಲ್ಲಿದೆ. ರಾಜಸ್ಥಾನ, ಕರ್ನಾಟಕ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಗುಜರಾತ್‌ನ ಕೆಲವು ಭಾಗಗಳಲ್ಲಿಯೂ ಪರಿಸ್ಥಿತಿ ಚಿಂತಾಜನಕವಾಗಿದೆ.

1982–83ರ ಈ ವರ್ಷದಲ್ಲಿ ಸರಕಾರ ಒಟ್ಟು 142.7 ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯಗಳ ಉತ್ಪಾದನೆಯ ಅಂದಾಜು ಮಾಡಿತ್ತು. ಆದರೆ ಮುಂಗಾರಿ ಬೆಳೆಯ ಉತ್ಪಾದನೆ ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ. ಅಂದರೆ ಬರಲಿರುವ ದಿನಗಳಲ್ಲಿ ತೀವ್ರ ಆಹಾರ ಧಾನ್ಯದ ಕೊರತೆಯಾಗುವುದು ಶತಃಸಿದ್ಧ. ಮೇಲ್ಕಾಣಿಸಿದ ಏಳು ರಾಜ್ಯಗಳ ಪರಿಸ್ಥಿತಿಯ ಚಿತ್ರಣ ಇಂತಿದೆ :

ಓರಿಸ್ಸಾ :

ರಾಜ್ಯದ ಬಹುಭಾಗ ಕ್ಷಾಮಪೀಡಿತವಾಗಿದೆ. ಮುಂಗಾರಿ ಬೆಳೆಯ ಕೇವಲ ಶೇ. 25 ಮಾತ್ರ ಕೈಗೆಟಕುವ ನಿರೀಕ್ಷೆ ಇದೆ. ರಾಜ್ಯದ ಎಲ್ಲಾ (13) ಜಿಲ್ಲೆಗಳು ಬರಗಾಲ ಪೀಡಿತವಾಗಿವೆ. ಕಳೆದ

(8ನೇ ಪುಟ ನೋಡಿ)

ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕ ಸಂಘಗಳ ಕರೆ

ನವೆಂಬರ್ ೮ ರಂದು ಪ್ರತಿಭಟನಾ ದಿನ

ಬ್ಯೂರೋ ಆಫ್ ಪಬ್ಲಿಕ್ ಎಂಟರ್ ಪ್ರೈಸಸ್ (ಬಿ. ಪಿ. ಇ.) ನಿರ್ದೇಶನಗಳನ್ನು ಪ್ರತಿಭಟಿಸಿ, ಸಾಮೂಹಿಕ ಚೌಕಾಶಿ ಹಕ್ಕನ್ನು ಪುನರುತ್ಥಾನಗೊಳಿಸಲು ನವೆಂಬರ್ 8 ರಂದು 'ಪ್ರತಿಭಟನಾ ದಿನ' (Protest Day) ನಡೆಸಲು ಅಕ್ಟೋಬರ್ 12–13 ರಂದು ಹೈದರಾಬಾದ್‌ನಲ್ಲಿ ನಡೆದ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕ ಸಂಘಗಳ ಸಮಾವೇಶ ಕರೆ ನೀಡಿದೆ.

ವಿವಿಧ ಸಾರ್ವಜನಿಕ ಉದ್ದಿಮೆ ವಲಯ (Public Sector) ಗಳಲ್ಲಿರುವ ಸುಮಾರು 300 ಯೂನಿಯನ್‌ಗಳ ಸುಮಾರು 600 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಹೈದರಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜನೀಯರ್ಸ್ ಸಭಾಂಗಣದಲ್ಲಿ ನಡೆದ ಈ ಸಮಾವೇಶ, ಸರಕಾರದ ವೇತನ ಸ್ಥಗಿತ ನೀತಿಯ ವಿರುದ್ಧ ತೀವ್ರ ಹೋರಾಟ ನಡೆಸಲು ದೃಢ ತೀರ್ಮಾನ ಕೈಗೊಂಡಿತು.

ಉಕ್ಕು, ಕಲ್ಲಿದ್ದಲು, ಬಿ. ಎಚ್. ಇ. ಎಲ್., ಫರ್ಟಿಲೈಸರ್, ಬೆಂಗಳೂರು ಮತ್ತು ಹೈದರಾಬಾದ್ ಆಧಾರಿತ ಕೇಂದ್ರೋದ್ಯಮಗಳ, ಇಂಡಿಯನ್ ಏರ್‌ಲೈನ್ಸ್, ಏರ್ ಇಂಡಿಯಾ, ಟೆಲಿಪ್ರಿಂಟರ್, ಇಲೆಕ್ಟ್ರಾನಿಕ್ಸ್, ಶಿಪ್ ಯಾರ್ಡ್, ಏರೋನಾಟಿಕ್ಸ್ ಮುಂತಾದ ಸಾರ್ವಜನಿಕ ಉದ್ದಿಮೆ ವಲಯಗಳಿಂದ ಪ್ರತಿನಿಧಿಗಳಾಗಮಿಸಿದ್ದರು.

ಇದೀಗ ಸುಮಾರು 150 ಸಾರ್ವಜನಿಕ ಉದ್ದಿಮೆ ವಲಯಗಳಲ್ಲಿ, ಹಳೆಯ ಒಪ್ಪಂದಗಳ ಅವಧಿ ಮುಗಿದಿದೆ ಅಥವಾ ಮುಗಿಯಲಿವೆ. ದಿಪಕ್ಷೀಯ ಮಾತುಕತೆಗಳಲ್ಲಿ ಬೆಳವಣಿಗೆಯೇನೂ ಆಗಿಲ್ಲ. ಬಿ. ಪಿ. ಇ. ನಿರ್ದೇಶನಗಳ ಪ್ರಕಾರ ಆಡಳಿತವರ್ಗಗಳು ವರ್ತಿಸುತ್ತಿರುವುದೇ ಇದಕ್ಕೆ ಕಾರಣ.

ಸರಕಾರ ತನ್ನ ನೀತಿಯನ್ನು ಬದಲಿಸುವಂತೆ ಒತ್ತಾಯಿಸಲು ಅಖಿಲ ಭಾರತ ಮಟ್ಟದಲ್ಲಿ ಹೋರಾಟ ಅನಿವಾರ್ಯವೆಂಬ ಅಭಿಪ್ರಾಯವನ್ನು ಪ್ರತಿನಿಧಿಗಳು ವ್ಯಕ್ತಪಡಿಸಿದರು. 1981ರಲ್ಲಿ ಬೆಂಗಳೂರು ಆಧಾರಿತ ಕೇಂದ್ರೋದ್ಯಮಗಳ ಕಾರ್ಮಿಕರ ಸುಮಾರು 80 ದಿನದ ಮುಷ್ಕರದ ಅನುಭವ ಪ್ರತಿನಿಧಿಗಳ ಅಭಿಪ್ರಾಯವನ್ನು ಸಮರ್ಥಿಸಿತು.

ಕಾ|| ಆರ್. ಉಮಾನಾಥ (ಸಿ. ಐ. ಟಿ. ಯು), ಕೆ. ಎಲ್. ಮಹೇಂದ್ರ (ಎ. ಐ. ಟಿ. ಯು. ಸಿ), ಮೈಕಲ್ ಫರ್ನಾಂಡಿಸ್ (ಎಚ್. ಎಂ. ಎಸ್), ಎಚ್. ಎನ್. ವಿಶ್ವಾಸ್ (ಬಿ. ಎಂ. ಎಸ್), ಎಸ್. ಸೇನ್ ಗುಪ್ತಾ (ಯು. ಟಿ. ಯು. ಸಿ), ಎಸ್. ಡಬ್ಲ್ಯೂ ಧಾಬೆ (ರಾಷ್ಟ್ರೀಯ ಮಜ್ದೂರ ಸಂಘ), ಅಮರ್ ಪಿ. ಚಕ್ರವರ್ತಿ (ಟಿ. ಯು ಸಿ. ಸಿ.) ಮತ್ತು ಸತೀಶ್ ದಾಸ್ (ಯು. ಟಿ. ಯು. ಸಿ. — ಎಲ್. ಎಸ್.) ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿ ಸಮ್ಮೇಳನದ ಕಲಾಪಗಳನ್ನು ನಿರ್ವಹಿಸಿತು.

ಸಮ್ಮೇಳನವನ್ನುದ್ದೇಶಿಸಿ ಕಾ|| ಇಂದ್ರಜಿತ್ ಗುಪ್ತಾ, ರಾಮ್ ನರೇಶ್ ಸಿಂಗ್, ಎಂ. ಕೆ. ಪಧೆ, ಎಸ್. ಡಬ್ಲ್ಯೂ ದಾಭೆ, ಮೈಕಲ್ ಫರ್ನಾಂಡಿಸ್ ಮತ್ತಿತರರು ಮಾತನಾಡಿ, ಸಮ್ಮೇಳನದ ಹಿನ್ನೆಲೆ ವಿವರಿಸಿದರು. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ರಾಷ್ಟ್ರವ್ಯಾಪಿ ಸಂಯುಕ್ತ ಹೋರಾಟ ಅತೀ ಮುಖ್ಯ ಎಂದು ಅವರು ನುಡಿದರು. ವಿವಿಧ ಉದ್ಯಮಗಳ ಸುಮಾರು 70 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಒಂಬತ್ತು ತಿಂಗಳಿಂದ ದೀರ್ಘ ಹೋರಾಟ ನಡೆಸುತ್ತಿರುವ ಎರಡೂವರೆ ಲಕ್ಷ ಮುಂಬೈನ ಹತ್ತಿ ಗಿರಣಿ ಕಾರ್ಮಿಕರನ್ನು ಅಭಿನಂದಿಸುವ ಮತ್ತು ಸರಕಾರ ಕೂಡಲೇ ಕಾರ್ಮಿಕರನ್ನು ಪ್ರತಿನಿಧಿಸುತ್ತಿರುವ ನಾಯಕರೊಂದಿಗೆ ಮಾತುಕತೆಗೆ ಮುಂದಾಗಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು. ಜನವರಿ 19, 1982ರ ಮುಷ್ಕರದ ಸಂದರ್ಭದಲ್ಲಿ ಕಾರ್ಮಿಕರ ವಿರುದ್ಧ ಕೈಗೊಂಡ ಕ್ರಮಗಳನ್ನು ಖಂಡಿಸಿ, ಬಿಹಾರ್‌ನ ಕರಾಳ ಪತ್ರಿಕಾ ಮಸೂದೆಯನ್ನು ಖಂಡಿಸುವ, ನವೆಂಬರ್ 8 ರಂದು ಒಂದು ದಿನ ಮುಷ್ಕರ ನಡೆಸಲಿರುವ ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ಬೆಂಬಲ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮುಖ್ಯ ನಿರ್ಣಯ (ವಿವರವನ್ನು ಮುಂದಿನವಾರ ಪ್ರಕಟಿಸಲಿದ್ದೇವೆ) ವನ್ನು ಕಾ|| ಸಮರ್ ಮುಖರ್ಜಿ ಮಂಡಿಸಿದರು. ನವೆಂಬರ 8 ರಂದು ಪ್ರತಿಭಟನಾ ದಿನ ಆಚರಣೆಯ ಕರೆಯನ್ನು ಪ್ರತಿನಿಧಿಗಳು ಹರ್ಷೋದ್ಗಾರಗಳೊಂದಿಗೆ ಸ್ವಾಗತಿಸಿದರು.

ಕಾ|| ಆರ್. ಉಮಾನಾಥ ಅಧ್ಯಕ್ಷ ಮಂಡಳಿಯ ಪರವಾಗಿ ಮಾತನಾಡಿ ನಿರ್ಣಯಗಳನ್ನು ಕಾರ್ಯಗತಗೊಳಿಸುವಲ್ಲಿ ಶ್ರಮಿಸಬೇಕೆಂದು ಮನವಿಮಾಡಿದರು.

ಸಮ್ಮೇಳನದ ಅಂಗವಾಗಿ 13 ರಂದು ಬಹಿರಂಗ ಸಭೆ ನಡೆಯಿತು. ಕಾ|| ಸಮರ್ ಮುಖರ್ಜಿ, ಇಂದ್ರಜಿತ್ ಗುಪ್ತ ಮತ್ತಿತರರು ಮಾತನಾಡಿದರು.

(8ನೇ ಪುಟ ನೋಡಿ)

ನನ್ನ ಭೂಗತ ಜೀವನದ ದಿನಗಳು

—ಇ. ಕೆ. ನಾಯನಾರ್

(ಕಳೆದ ಸಂಚಿಕೆಯಿಂದ)

ಅಂಚಂಪೀಡಿಕಾದಲ್ಲಿ ನಡೆದ ಪ್ರಕರಣದ ಸುದ್ದಿ ದೇಶದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು. ಸಬ್-ಇನ್‌ಸ್ಪೆಕ್ಟರ್ ಕುಟ್ಟಿಕೃಷ್ಣ ಮೆನನ್ ಸ್ಥಳದಲ್ಲೇ ಮೃತಪಟ್ಟನು. ಹೆಡ್ ಕಾನ್‌ಸ್ಟೇಬಲ್ ಗೋಪಾಲನ್ ನಾಯರ್ ಆಸ್ಪತ್ರೆಯಲ್ಲಿ ಅಸು ನೀಗಿದನು. ಮೊರಾಜಾಕ್ಕೆ ಒಂದು ಪೋಲೀಸ್ ಪಡೆ ಬಂದು ಮನೆಮನೆಗೆ ನುಗ್ಗಿ ಕೈಗೆ ಸಿಕ್ಕಿದವರನ್ನೆಲ್ಲಾ ಹೊಡೆದರು. ಸಭೆ ನಡೆದ ಸ್ಥಳದಲ್ಲಿ ಬಿದ್ದಿದ್ದ ಲಾಠಿಗಳನ್ನು ಪೋಲೀಸರು ವಶಪಡಿಸಿಕೊಂಡು ತಮ್ಮ ತನಿಖೆ ಪ್ರಾರಂಭಿಸಿದರು. ನಾನು ಎತ್ತರವಾದ ಮತ್ತು ದಪ್ಪವುಪ್ಪವಾದ ಶರೀರದವನಾದ್ದರಿಂದ ಗುಂಪಿನಲ್ಲಿ ನನ್ನನ್ನು ಗುರುತಿಸುವುದು ಬಹಳ ಸುಲಭವಾಗಿತ್ತು. ಈ ಸಮಸ್ಯೆಯಿಂದಾಗಿ ನಾನು ಬಹಳ ಎಚ್ಚರಿಕೆಯಿಂದಿರಬೇಕಾಗಿತ್ತು. ಭೂಗತನಾಗಿ ತಲೆಮರೆಸಿಕೊಂಡಿರುವುದು ಮತ್ತಷ್ಟು ಕಷ್ಟದ ಕೆಲಸವಾಗಿತ್ತು.

ಹೊಸದುರ್ಗದ ಮಾರ್ಗವಾಗಿ ನಾನು ತಕ್ಷಣ ಕರ್ನಾಟಕಕ್ಕೆ ಹೊರಟೆನು. ಇಡೀ ದೂರವನ್ನು ಕಾಲುದಾರಿಗಳನ್ನು ಅನುಸರಿಸಿ ರಾತ್ರಿಯಲ್ಲೇ ಬಹು ಎಚ್ಚರಿಕೆಯಿಂದ ಕ್ರಮಿಸಬೇಕಾಗಿತ್ತು. ಹಗಲು ವೇಳೆಯಲ್ಲಿ ರೈತ ಚಳುವಳಿಗೆ ಸಂಬಂಧಿಸಿದ ಯಾರದಾದರೊಬ್ಬರ ಮನೆಯಲ್ಲಿ ಕಳೆಯಬೇಕಾಗಿತ್ತು. ಪೋಲೀಸರ ಚಲನೆ ಮತ್ತಿತರ ವಿಷಯಗಳ ಬಗ್ಗೆ ನಾನು ಸುದ್ದಿಗಳನ್ನು ಪಡೆಯಬಹುದಿತ್ತು. ಕಾಡಿನಲ್ಲಿ ನಡೆಯಬೇಕಾಗಿದ್ದ ಈ ಕಾಲದಲ್ಲೇ ನಾನು ಒಂಟು (ಸೂ) ಹಾಕಲು ಪ್ರಾರಂಭಿಸಿದ್ದು. ಇಲ್ಲವಾದರೆ ಜಿಗಣೆ, ಮುಳ್ಳುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಭೂಗತ ಜೀವನದ ದಿನಗಳನ್ನು ಕಳೆಯುತ್ತಾ ಸೂ ಹಾಕುವುದು ಅಭ್ಯಾಸವಾಯಿತು. ನನ್ನ ಪ್ರಯಾಣದ ನಾಲ್ಕನೆಯ ದಿನ ರೈತ ಸಂಘದ ಕಾರ್ಯಕರ್ತರೊಬ್ಬರ ಮನೆಗೆ ಹೋದೆನು ಹಗಲು ವೇಳೆಯನ್ನು ಬೆಟ್ಟದ ಇಳಿಜಾರಿನಲ್ಲಿದ್ದ ಈ ಮನೆಯಲ್ಲಿ ಕಳೆಯಬೇಕೆಂದು ನನಗೆ ಸೂಚನೆ ನೀಡಲಾಗಿತ್ತು.

ಊಟ-ತಿಂಡಿಗಳಿಲ್ಲದೆ ಬಹುದೂರ ನಡೆದಿದ್ದರಿಂದ ನಾನು ಬಹಳ ದಣಿದಿದ್ದೆನು. ನಾನು ತಂಗಿದ್ದ ರೈತನ ಗುಡಿಸಲಿನಲ್ಲಿ ಎರಡು ಕೋಣೆಗಳು ಮಾತ್ರ ಇದ್ದವು. ಅದರಲ್ಲೊಂದನ್ನು ಅಡಿಗೆಮನೆಯನ್ನಾಗಿ ಉಪಯೋಗಿಸಲಾಗುತ್ತಿತ್ತು. ನನ್ನ ಆಶ್ರಯದಾತ, ಅವನ ಹೆಂಡತಿ ಮತ್ತು ಅವರ ಪುಟ್ಟ ಮಗು ಮತ್ತೊಂದು ಕೊಠಡಿಯನ್ನು ಮಲಗುವ ಕೋಣೆಯಾಗಿ ಉಪಯೋಗಿಸುತ್ತಿದ್ದರು. ಆ ಕೊಣೆಯಲ್ಲೇ ಒಂದು ಮೂಲೆಯಲ್ಲಿ ನಾನು ಮಲಗಲು ಒಂದು ಚಾಪೆ ಹಾಸಿದರು. ದಂಪತಿಗಳಿಬ್ಬರೂ ಅಡುಗೆ ಮನೆಯ ಬಳಿ ಮತ್ತೊಂದು ಚಾಪೆ ಹಾಸಿಕೊಂಡರು. ವಿಪರೀತ ದಣಿದಿದ್ದರಿಂದ ನಾನು ಮಲಗಿದ್ದ ಕೂಡಲೇ ಗಾಢ ನಿದ್ರೆ ಆವರಿಸಿತು.

ಇದ್ದಕ್ಕಿದ್ದಂತೆ ಯಾರೋ ನನ್ನನ್ನು ಅಲುಗಾಡಿಸಿದರು. ನಾನು ಎಚ್ಚರಗೊಂಡೆ. 'ಏನಿದು ?' ಎಂದು ಕೇಳಿದೆ. 'ಯಾರೋ ಬರುತ್ತಿದ್ದಾರೆ.' ಎಂದು ಉತ್ತರ ಬಂದಿತು. ಬೆಳದಿಂಗಳ ರಾತ್ರಿಯಾದ್ದರಿಂದ ದೂರದಿಂದ ಯಾರೇ ಬಂದರೂ ನೋಡಬಹುದಿತ್ತು. 'ನಾವು ಒಂದು ಉಪಾಯ ಮಾಡಿದ್ದೇವೆ. ನೀವು ಯಾರೇ ಕರೆದರೂ ನಿಶ್ಶಬ್ದವಾಗಿ ಮಲಗಿ', ನನಗೆ ಏನೊಂದೂ ಗೊತ್ತಾಗಲಿಲ್ಲ. ಆದರೆ ಪೋಲೀಸರು ಬರುತ್ತಿದ್ದಾರೆಂದು, ಬೆಳದಿಂಗಳಲ್ಲಿ ಹೊರಗೆ ಹೋಗುವುದು ಅಪಾಯವೆಂದು ತಿಳಿಯಿತು. ಆದ ಕಾರಣ ನಾನು ಒಪ್ಪಿದೆನು. ಅವನು ತನ್ನ ಪಂಚೆಯನ್ನು ನನ್ನ ಮೇಲೆ ಹೊದಿಸಿದನು. ಮಗುವನ್ನು ನನ್ನ ಪಕ್ಕದಲ್ಲಿ ಮಲಗಿಸಿದನು. ಅವನ ಹೆಂಡತಿ ಮಗುವಿನ ಪಕ್ಕದಲ್ಲಿ ಮಲಗಿದರು. ನನಗೆ ತೀರಾ ಅಪರಿಚಿತರಾಗಿದ್ದ ಮಹಿಳೆಯೊಬ್ಬರ ಸಂಗಡ ಒಂದೇ ಚಾಪೆಯಲ್ಲಿ ಮಲಗಲು ಸ್ವಲ್ಪ ಮುಜುಗರವಾಯಿತು. ರೈತನು ಹಿಂಬಾಗಿಲಿನಿಂದ ಮನೆಯಿಂದ ಹೊರಬಿದ್ದು ಅದೃಶ್ಯನಾದನು. ನಾನು ನಿಶ್ಶಬ್ದನಾಗಿ, ನಿಶ್ಚಲನಾಗಿ ಮಲಗಿದೆ.

ಕೆಲವು ಕ್ಷಣಗಳಾದ ಮೇಲೆ ಹೆಜ್ಜೆಯ ಸಪ್ಪಳ ಕೇಳಿ ಬಂದಿತು. ಟಾರ್ಚೊಂದರ ಬೆಳಕನ್ನು ಕಂಡೆನು. ನಾನು ಮಲಗಿದ್ದ ಕೋಣೆಯತ್ತ ಲೇಬೆಳಕುಚೆಲ್ಲಿತ್ತು. 'ನೋಡಿ, ಅವನು, ಅವನ ಹೆಂಡತಿ ಮತ್ತು ಮಗು ಮಾತ್ರ ಇರುವುದು. ಅಲ್ಲಿ ಮತ್ತಾರೂ ಇಲ್ಲ. ಇಷ್ಟು ದೂರ ಬಂದಿದ್ದು ವ್ಯರ್ಥ. ಎಂದು ಯಾರೋ ಹೇಳಿದ್ದು ಕೇಳಿಸಿತು. 'ಇಲ್ಲಿ ಯಾರೋ ಬಂದರೆಂದು ನನಗೆ ಯಾಗು ಹೇಳಿದ್ದು ?' ಎಂದು ಹೇಳಿ ಬಾಗಿಲನ್ನು ತಟ್ಟಿದರು. ಆಗ ರೈತನ ಪತ್ನಿ ಎದ್ದು ನಿಧಾನವಾಗಿ ಕದವನ್ನು ಸ್ವಲ್ಪ ತೆರೆದು ಕೇಳಿದಳು 'ಏನಾಯಿತು ಸ್ವಾಮಿ ? ಈ ಮಧ್ಯ ರಾತ್ರಿಯಲ್ಲಿ ನೀವು ಇಲ್ಲಿಗೇಕೆ ಬಂದಿರಿ ?'. 'ನಿನ್ನ ಕೋಣೆಯಲ್ಲಿ ಯಾರಿದ್ದಾರೆ ?' ಎಂದು ಯಾರೋ ಕೋಪದಿಂದ ಕೇಳಿದರು. 'ಏಕೆ ? ನನ್ನ ಗಂಡ ಎರಡು ದಿನಗಳಿಂದ ಜ್ವರ ಬಂದು ಮಲಗಿದ್ದಾರೆ. ಗಂಜಿಯನ್ನು ಸಹ ಕುಡಿದಿಲ್ಲ. ಸದ್ಯ ನನ್ನ ಮಗು ನಿಗೂ ಅವನ ಜ್ವರ ತಗಲದಿರಲೆಂದು ಪ್ರಾರ್ಥಿಸುತ್ತಿದ್ದೇನೆ' ಎಂದು ಹೇಳಿ ಆಕೆ ಕದವನ್ನು ಪೂರ್ತಿ ತೆರೆದು ಹೊರಗೆ ಹೋದರು. ಬಂದಿದ್ದವರು ಕೋಣೆಯ ಮೂಲೆ ಮೂಲೆಗೂ ಟಾರ್ಚ್ ಬೆಳಕು ಚೆಲ್ಲಿ ಯಾರಾದರೂ ಇದ್ದಾರೇನೆಂದು ನೋಡಿದರು. 'ಅವರು ನಾಳೆ ಕೆಲಸಕ್ಕೆ ಬರೋದಿಲ್ಲ. ನಾಳೆ ಮಾತ್ರವಲ್ಲ ಈ ವಾರ ಪೂರ್ತಿ ಬರೋದಿಲ್ಲ. ಅವರು ಮೆಣಸು ನೀರನ್ನು ಮಾತ್ರ ಕುಡಿಯುತ್ತಿದ್ದಾರೆ. ಏನು ಸುದ್ದಿ ? ಅವರನ್ನು ಎಳಿಸಲೇ ?'

'ಈ ಕಡೆ ಯಾರಾದರೂ ಈ ದಿನ ಬಂದಿದ್ದರೇ ?'

'ಈ ದಿನ ಸಂಜೆ ಯಾರೋ ಆ ಕೆಳಗಿನ ರಸ್ತೆಯಲ್ಲಿ ಉತ್ತರದ ಕಡೆ ಹೋಗುತ್ತಿದ್ದುದನ್ನು ನೋಡಿದೆ'.

'ಅವನು ಇಲ್ಲಿಲ್ಲ. ಬೇರೆ ಎಲ್ಲೋ ಹೋಗಿರಬೇಕು. ನಾವಿನ್ನು ಹೋಗೋಣ, ಎಂದು ಯಾರೋ ಹೇಳಿದರು.

ಮಗು ಎದ್ದು ಕುಳಿತು ಅಳಲಾರಂಭಿಸಿತು. 'ಅಳಬೇಡ, ನಾನು ಬರುತ್ತಿದ್ದೇನೆ. ನೀನು ಅತ್ತು ಅಪ್ಪನನ್ನು ಎಬ್ಬಿಸಿಬಿಟ್ಟೀಯಾ'.

'ಹೋಗು, ಮಗುವನ್ನು ಸಮಾಧಾನಪಡಿಸು ಹೋಗು' ಎಂದು ಯಾರೋ ಹೇಳಿದರು.

'ಪ್ರಾರಬ್ಧ'. ಆಕೆ ಕೋಣೆಯೊಳಗೆ ಬಂದು ಜೋರಾಗಿ ಕದವನ್ನು ಮುಚ್ಚಿದಳು.

ಸ್ವಲ್ಪ ಸಮಯದ ನಂತರ ನನ್ನ ಆಶ್ರಯದಾತ ಬಂದನು. ಕೂಡಲೇ ನನ್ನನ್ನು ಬೇರೊಂದು ಮನೆಗೆ ಕರೆದೊಯ್ದನು.

ಕಯ್ಯೂರು ಬಂಡಾಯದ ಮುಂಚಿನ ದಿನಗಳ ಮತ್ತೊಂದು ಘಟನೆ ನನಗೆ ನೆನಪಾಗುತ್ತದೆ. :

"ನನ್ನ ಸಂಗಾತಿಗಳು ಸಣ್ಣ ಗುಡಿಸಲೊಂದರಲ್ಲಿ ನನಗೆ ತಂಗಲು ವ್ಯವಸ್ಥೆ ಮಾಡಿದ್ದರು. ಅದರಲ್ಲಿ ತೆಂಗಿನಗರಿಗಳ ತಡಿಕೆಯ ಒಂದು ಕೋಣೆಯಿತ್ತು. ನಾನು ಸಣ್ಣ ದೀಪವೊಂದರ ಬೆಳಕಿನಲ್ಲಿ ಓದುತ್ತಿದ್ದೆ. ಆ ರಾತ್ರಿಯೂ ಬೆಳದಿಂಗಳ ರಾತ್ರಿಯಾಗಿತ್ತು. ನಾನು ಬೀಡಿಗಳನ್ನು ಸೇದುತ್ತಾ ಓದುತ್ತಿದ್ದೆನು. ರಾತ್ರಿ ಸುಮಾರು 10 ಗಂಟೆಯಿರಬಹುದು. ಯಾರೋ ಗುಡ್ಡವನ್ನು ಹತ್ತಿ ಬರುತ್ತಿರುವ ಸಪ್ಪಳ ಕೇಳದಂತಾಯಿತು. ನಾನು ದೀಪವನ್ನಾರಿಸಿ ನಿಶ್ಚಲನಾದೆ. ಬರುತ್ತಿರುವ ಆಗಂತುಕ ವ್ಯಕ್ತಿ ಅಪಾಯಕಾರಿ ಮನುಷ್ಯನಲ್ಲವೆಂದು ತಕ್ಷಣ ಹೊಳೆಯಿತು. ಇಲ್ಲವಾದಲ್ಲಿ ಗುಡ್ಡದ ಕೆಳಗಿದ್ದ ಸಂಗಾತಿಗಳು ಅಗತ್ಯ ಮುನ್ನೆಚ್ಚರಿಕೆ ನೀಡುತ್ತಿದ್ದರು. ಯಾರೋ ಒಬ್ಬ ವ್ಯಕ್ತಿ ಹೊರಗಿನಿಂದ ಕದವನ್ನು ತಟ್ಟಿದನು. ನನಗೆ ಆಶ್ರಯ ನೀಡಿದಾಕೆ ಸ್ವಲ್ಪವೂ ಸದ್ದಾಗದಂತೆ ಕದವನ್ನು ತೆರೆದಳು. ಅವನು ಒಳಗೆ ಬಂದ ನಂತರ ಇಬ್ಬರ ನಡುವೆಯೂ ವಾದ ಪ್ರಾರಂಭವಾಯಿತು. ಈ ಚರ್ಚೆಯನ್ನು ಕೇಳಿದ ನಂತರ ನಾನು ಆಶ್ರಯ ಪಡೆದಿದ್ದ ಆ ಮನೆಯು ವೇಶ್ಯಾಗೃಹವೆಂದು ಆಗ ಅರ್ಥವಾಯಿತು. ಅವರು ರೇಟಿನ ಬಗ್ಗೆ ವಾದಿಸುತ್ತಿದ್ದಾಗ ನಾನು ಸದ್ದಿಲ್ಲದೆ ಹೊರಬಿದ್ದೆ. ಬೆಳದಿಂಗಳಲ್ಲಿ ಗುಡ್ಡ ಮತ್ತು ಸುತ್ತು ಮುತ್ತಲಿನ ಪ್ರದೇಶದ ಕಡೆ ಕಣ್ಣಾಯಿಸಿದೆ. ನಾನೊಂದು ಎಚ್ಚರಿಕೆಯ ಸೂಚನೆ ನೀಡಿದೆ. ತಕ್ಷಣ ಪಕ್ಕದ ಮನೆಯಿಂದ ಒಬ್ಬ ಸಂಗಾತಿ ಬಂದನು. ನಾನು ಆ ಮನೆಯಲ್ಲಿರಲು ಸಾಧ್ಯವಿಲ್ಲವೆಂದು ಅವನಿಗೆ ಹೇಳಿ ನನ್ನ ವಸ್ತುಗಳನ್ನು ಕಟ್ಟಿಕೊಂಡು ಬರುವುದಾಗಿ ತಿಳಿಸಿದೆನು. ಬೇರೊಂದು ಮನೆಯಲ್ಲಿ ಆಶ್ರಯ ದೊರಕಿಸುವಂತೆ ನಾನು ಕೇಳಿದಾಗ ಆತನು ಹುಡುಕಲು ಹೊರಟನು. ನಾನು ಕೊಠಡಿಗೆ ಹಿಂತಿರುಗಿ ಚೀಲಕ್ಕೆ ನನ್ನ ವಸ್ತುಗಳನ್ನೆಲ್ಲಾ ತುಂಬಿಕೊಂಡು ಸದ್ದಿಲ್ಲದೆ ಹೊರ ಬಂದೆನು. ಅವರಿನ್ನೂ ಪರಸ್ಪರ ವಾದಿಸುತ್ತಲೇ ಇದ್ದರು.

ನನ್ನ ಸಂಗಾತಿಗಳು ಬಂದರು. ನಾನು ಅವರೊಡನೆ ಸೇರಿಕೊಂಡೆನು. ಸ್ವಲ್ಪ ದೂರ ನಡೆದ ಮೇಲೆ ರಸ್ತೆಯ ಪಕ್ಕದಲ್ಲಿದ್ದ ಎರಡಂತಸ್ತಿನ ಹಳೆಯ ಮನೆಯೊಂದರ ಬಳಿ ತಲುಪಿದೆವು. ಮಹಡಿಯ ಮೇಲೆ ಏರಲು ಹೇಗೋ ಅವರು ನನಗೆ ಸಹಾಯ ಮಾಡಿದರು. ಅಲ್ಲಿ ಒಂದು ಚಾಪೆ ಮತ್ತು ದಿಂಬು ಇದ್ದುದನ್ನು ಕಂಡೆನು. ಈ ಮಹಡಿಗೆ ಮೆಟ್ಟಲುಗಳೇ ಇರಲಿಲ್ಲ. ಈ ಪಾಳು ಮನೆಗೆ ಯಾರೂ ಬರಲಾರರೆಂಬ ಭರವಸೆಯಿಂದ ನಿಶ್ಚಿಂತನಾಗಿ ಮಲಗಿದೆ. 'ದೀಪವನ್ನು ಹೊತ್ತಿಸಬೇಡ, ಇದು ರಸ್ತೆ ಬದಿಯಲ್ಲಿರುವ ಮನೆ' ಎಂದು ನನ್ನ ಸಂಗಾತಿಗಳು ಹೇಳಿ ಹೋದರು. ಬೆಳಗಾದಾಗ ರಸ್ತೆಯಲ್ಲಿ ಜನರ ಸಪ್ಪಳ ಕೇಳ ಬಂದಿತು. ನಾನು ಬಿಟ್ಟು ಬಂದ ತಕ್ಷಣ ಪೋಲೀಸರು ನನ್ನನ್ನು ಹುಡುಕಿಕೊಂಡು ಹೋಗಿದ್ದರೆಂದು ಎರಡು ಮೂರು ದಿನಗಳ ಬಳಿಕ ನನಗೆ ತಿಳಿಯಿತು. ಯಾರೋ ಪೋಲೀಸರಿಗೆ ಸುದ್ದಿ ಮುಟ್ಟಿಸಿದ್ದರು. ಆಗ ಅಲ್ಲಿದ್ದ ಗಂಡಸನ್ನು ನಾನೆಂದು ತಪ್ಪು ತಿಳಿದು ಹಿಡಿದುಕೊಂಡರು. ಅವನನ್ನ ಹೊಡೆದಾಗ ತಾನು ಯಾರೆಂದು ತಿಳಿಸಿದನು. ಪೋಲೀಸರು ಮನೆಯನ್ನೆಲ್ಲಾ ಪರಿಶೀಲಿಸಿದಾಗ ಪಕ್ಕದ ಕೋಣೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಮಲಗಿ ಹೋಗಿದ್ದಾನೆಂದು ತಿಳಿದು ಬಂದಿದೆ. ಅಲ್ಲಿ ಯಾರೋ ತಂಗಿದ್ದರೆಂದು ಪೋಲೀಸರಿಗೆ ಖಾತರಿಯಾಗಿ ಆ ಮಹಿಳೆಯನ್ನು ಪ್ರಶ್ನಿಸಿದರು. ಎಷ್ಟೇ ಹಿಂಸೆ ಕೊಟ್ಟು ಬೆದರಿಸಿದರೂ ನಾನು ನಾಲ್ಕು ದಿನಗಳ ಕಾಲ ಆ ಮನೆಯಲ್ಲಿ ಅಡಗಿಕೊಂಡಿದ್ದೆನೆಂಬ ಗುಟ್ಟನ್ನು ಆಕೆ ಬಿಟ್ಟುಕೊಡಲಿಲ್ಲ.

(ಮುಂದುವರೆಯುವುದು)

ಹೊಸಪೇಟೆ :

ಸೈಫಂಡರಿ ಪದವೀಧರರ ಸಭೆ

12-10.82 ರಂದು ಹೊಸಪೇಟೆಯಲ್ಲಿ ತಾಲ್ಲೂಕಿನ ಸೈಫಂಡರಿ ಪದವೀಧರರ ಸಭೆ ನಡೆಯಿತು ಸಭೆಗೆ ಡಿ ವೈ ಎಫ್ ಐ ರಾಜ್ಯ ಸಮಿತಿ ಅಧ್ಯಕ್ಷರೂ, ಸೈಫಂಡರಿ ಪದವೀಧರರ ಕ್ರಿಯಾಸಮಿತಿಯ ಮುಖಂಡ ಕಾಂ। ವಿ. ಜಿ. ಕಮ್ಮಾರ ಹಾಗೂ ಡಿ. ವೈ. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ। ಜಿ ವಿ. ಶ್ರೀರಾಮರೆಡ್ಡಿ ಅವರುಗಳು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಬಾಲರೆಡ್ಡಿಯವರು ವಹಿಸಿದ್ದರು.

ಕಾಂ। ಕಮ್ಮಾರ ಮತ್ತು ಕಾಂ। ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಸೈಫಂಡರಿ ಪದವೀಧರರ ಉದ್ಯೋಗ ಕಾಯಂ ಮಾಡುವಂತೆ ಸರಕಾರವನ್ನು ಒತ್ತಾಯಿಸಿದರು. ಆರಂಭದಲ್ಲಿ ಕಾಂ। ತಾಯಪ್ಪ ಸ್ವಾಗತಿಸಿದರು. ಕಾಂ। ಜಂಬಯ್ಯ ನಾಯಕ ವಂದಿಸಿದರು.

ತಾಲ್ಲೂಕು ಡಿ.ವೈ.ಎಫ್.ಐ. ಸಭೆ

13-10-82ರ ಸಂಜೆ ಡಿ.ವೈ ಎಫ್. ಐ. ಹೊಸಪೇಟೆ ತಾಲ್ಲೂಕು ಸಮಿತಿಯು ಸ್ಥಳೀಯ ಭುವನೇಶ್ವರಿ ವ್ಯಾಯಾಮ ಶಾಲೆಯ ಆಶ್ರಯದಲ್ಲಿ 'ಭಾರತದಲ್ಲಿ ನಿರುದ್ಯೋಗ' ಎಂಬ ವಿಷಯದ ಕುರಿತು ಭಾಷಣ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಮುಖ್ಯಭಾಷಣಕಾರರಾಗಿ ಕಾಂ। ಜಿ.ವಿ ಶ್ರೀರಾಮರೆಡ್ಡಿ ಆಗಮಿಸಿದ್ದರು.

ಕಾಂ। ಶ್ರೀರಾಮರೆಡ್ಡಿ ಮಾತನಾಡುತ್ತಾ ನಿರುದ್ಯೋಗ ಸಮಸ್ಯೆಯ ಕುರಿತು ವಿವರಿಸಿದರು. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಬೇಕೆಂದು ಅವರು ತಿಳಿಸಿದರು.

ಆರಂಭದಲ್ಲಿ ಭುವನೇಶ್ವರಿ ವ್ಯಾಯಾಮ ಶಾಲೆಯ ಕಾರ್ಯದರ್ಶಿ ಎಂ.ಎಸ್. ರಘು ಸ್ವಾಗತಿಸಿದರು. ಕೊನೆಯಲ್ಲಿ ಕಾಂ। ರಾಮಚಂದ್ರ ನಾವಡ ವಂದಿಸಿದರು.

ಕೇಂದ್ರ ಸಮಿತಿಯ ವರದಿ :

ಐ. ಎಂ. ಎಫ್. ಒಪ್ಪಂದದ ಪರಿಣಾಮ

(ಕಳೆದ ಸಂಚಿಕೆಯಿಂದ)

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್.) ಯಿಂದ ಅಗಾಧ ಮೊತ್ತದ ಸಾಲಕ್ಕೆ ಅರ್ಜಿ ಸಲ್ಲಿಸುವ ಕಾಲದಲ್ಲಿ ಸರಕಾರವು "ತಾತ್ಕಾಲಿಕ ಸಮಸ್ಯೆಯೊಂದರಿಂದಪಾರಾಗುವುದಷ್ಟೇ ಈ ಸಾಲ ಎತ್ತುವುದರ ಉದ್ದೇಶವೆಂದೂ, ಜಾಗತಿಕ ಬ್ಯಾಂಕ್, ಐ.ಎಂ.ಎಫ್. ಮೊದಲಾದ ಸಂಸ್ಥೆಗಳಿಂದ ಅಪಾರ ಮೊತ್ತದ 'ಸಹಾಯ' ದೊರಕದಿದ್ದಲ್ಲಿ, ಕೊರತೆಯಾಗಿರುವ ಹಣಕಾಸನ್ನು ಬೇರೆ ಯಾವ ಮಾರ್ಗದಿಂದಲೂ ಪಡೆಯಲು ಸಾಧ್ಯವಿಲ್ಲವೆಂದೂ ಹೇಳಿಕೊಂಡಿತ್ತು. ಅಷ್ಟೇ ಅಲ್ಲದೆ ಇಂತಹ 'ನೆರವು' ಈ ತಾತ್ಕಾಲಿಕವಾಗಿರುವ ಮುಗ್ಗಟ್ಟಿನಿಂದ ಬಚಾಯಿಸಿಕೊಳ್ಳಲು ಸಹಾಯಕವಾಗುವುದೆಂದೂ, ಅದು ನಮ್ಮ ಅರ್ಥಿಕತೆಯನ್ನು ಖಂಡಿತವಾಗಿಯೂ ಸ್ವಾವಲಂಬಿಯಾಗಿ ಮಾಡಬಲ್ಲುದೆಂದೂ ಹೇಳಲಾಗಿತ್ತು. ನಮ್ಮ ಆರ್ಥಿಕತೆ ಇದೀಗ "ತಲೆಯೆತ್ತಿ ನೋಡಲಾರಂಭಿಸಿರುವುದರಿಂದ" ಐ.ಎಂ.ಎಫ್. ಸಾಲದ ಕೊನೆಯ ಕಂತನ್ನು ಪ್ರಾಯಶಃ ನಾವು ಪಡೆಯುವ ಅಗತ್ಯವೇ ಇರಲಾರದೆಂದೂ ಆಗಿನ ಅರ್ಥಮಂತ್ರಿ ವೆಂಕಟರಾಮನ್ ಅವರು ಹೇಳಿಕೊಂಡಿದ್ದರು.

ಐ.ಎಂ.ಎಫ್. ನೊಂದಿಗೆ ಒಪ್ಪಂದವಾಗಿ ಸಾಲದ ಕಂತುಗಳು ಬರಲಾರಂಭಿಸಿದ ಮೇಲೆ ನಮ್ಮ ಆರ್ಥಿಕತೆಯ ಪರಿಸ್ಥಿತಿ ಏನಾಗಿದೆ ? ನಮ್ಮ ಅರ್ಥ ವ್ಯವಸ್ಥೆ ಸ್ವಾವಲಂಬಿಯಾಗುವುದಂತಿರಲಿ, ಅಂತರರಾಷ್ಟ್ರೀಯ ವಾಣಿಜ್ಯ ಕ್ಷೇತ್ರದಲ್ಲಿ ನಾವು ಮರುಪಾವತಿ ಮಾಡಬೇಕಾದ ಮೊತ್ತ ಇನ್ನಷ್ಟು ಅಧಿಕಗೊಂಡಿದೆ; ನಮ್ಮ ಸಾಲದ ಪರಿಸ್ಥಿತಿ ಇನ್ನಷ್ಟು ಕೆಟ್ಟಿದೆ. "ನಿರ್ಯಾತಕ್ಕಾಗಿ ಉತ್ಪಾದನೆ" ಯನ್ನು ಉತ್ತೇಜಿಸುವ ನೆಪದಲ್ಲಿ ಆಮದುಗಳನ್ನು ಅಧಿಕಗೊಳಿಸಲಾಗಿದೆ. ಬಂಡವಾಳಶಾಹಿ ಜಾಗತಿಕ ಮಾರುಕಟ್ಟೆಯಲ್ಲಿ ನಿಕಟ ಸ್ಪರ್ಧೆಯಿರುವುದನ್ನೂ ಇಂತಹ ಮಾರುಕಟ್ಟೆಯಲ್ಲಿ ಯಾವತ್ತೂ ಬೆಲೆಗಳು ತೃತೀಯ ಜಗತ್ತಿನ ರಾಷ್ಟ್ರಗಳ ಹಿತಾಸಕ್ತಿಗೆ ವಿರುದ್ಧವಾಗಿ ನಿಗದಿಯಾಗುತ್ತವೆಂಬುದನ್ನೂ ಇಲ್ಲಿ ಗಮನಿಸಬೇಕು.

1980ರ ದಶಕದಲ್ಲಿ ಭಾರತವನ್ನು ಒಳಗೊಂಡಂತೆ ಕಮ್ಮಿ ವರಮಾನವಿರುವ ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಅವುಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ನಿರಂತರ "ನೆರವು" ಪಡೆಯುವ ಅಗತ್ಯವಿದೆಯೆಂದು ಈ ವರ್ಷದ ಜಾಗತಿಕ ಬ್ಯಾಂಕ್ ಮತ್ತು ಐ. ಎಂ. ಎಫ್. ನ ವರದಿಗಳು ಅಂದಾಜು ಮಾಡಿವೆ. ಅಂದರೆ ಭಾರತವು ಜಾಗತಿಕ ಬ್ಯಾಂಕ್ ಮತ್ತು ಐ.ಎಂ.ಎಫ್. ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಮಾತ್ರವಲ್ಲ. ಇತರ ವಿದೇಶೀ ವಾಣಿಜ್ಯ ಬ್ಯಾಂಕುಗಳಿಂದಲೂ ಸಾಲ ಪಡೆಯುವಂತೆ ಅದನ್ನು ಬಲವಂತ ಮಾಡಲಾಗುತ್ತಿದೆ.

ಹಾಗಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸಾಲವು ದೇಶದ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರುವುದು ಸ್ಪಷ್ಟ. ಅಷ್ಟೇ ಅಲ್ಲ ಇದು ನಮ್ಮ ಆಂತರಿಕ ಅರ್ಥವ್ಯವಸ್ಥೆಯನ್ನೂ ಕೆಡಿಸುತ್ತಿದೆ. ದುಡಿಯುವ ಜನತೆಯ ಜೀವನ ಮಟ್ಟದ ಮೇಲೆ ಇನ್ನೂ ಆಕ್ರಮಣಗಳನ್ನು ಹೇರಬೇಕೆನ್ನುವುದು ಐ.ಎಂ.ಎಫ್. ಒಡ್ಡಿರುವ 'ಶರತ್ತು'ಗಳಲ್ಲಿ ಒಂದಾಗಿದೆ.

ಗ್ರಾಹಕರಿಗೂ. ರೈತರನ್ನೂ ಒಳಗೊಂಡಂತೆ ಸಣ್ಣ ಉತ್ಪಾದಕರಿಗೆ ಸ್ವಲ್ಪವಾದರೂ ಪರಿಹಾರವೊದಗಿಸುತ್ತಿದ್ದ ಆಹಾರ ಮತ್ತಿತರ ವಸ್ತುಗಳ ಮೇಲಿನ ಸಹಾಯ ಧನವನ್ನು ರದ್ದುಪಡಿಸುವುದು, ವಿದ್ಯುತ್ತು, ಸಾರಿಗೆ, ರೇಲ್ವೆ, ಅಂಚೆ ಮತ್ತು ತಂತಿ ಇತ್ಯಾದಿ ಸೇವಾ ಸೌಲಭ್ಯಗಳ ದರದಲ್ಲಿ ಹೆಚ್ಚಳ, ಸಾಮಾನ್ಯ ಜನರನ್ನಷ್ಟೇ ಬಾಧಿಸುವ ಅಪ್ರತ್ಯಕ್ಷ ತೆರಿಗೆಗಳ ಏರಿಕೆ, ಕಾರ್ಮಿಕರು, ನೌಕರರ ವೇತನ ಹೆಚ್ಚಳದ ಮೇಲೆ ನಿಯಂತ್ರಣ, ಮಧ್ಯಮ ಮತ್ತು ಸಣ್ಣ ಮಟ್ಟದ ಕೈಗಾರಿಕೋದ್ಯಮಿಗಳ ಮೇಲೆ ನೇರವಾಗಿ ಹೊಡೆತ ಬೀಳುವಂತೆ ಸಾಲ ನೀಡಿಕೆಯನ್ನು ಬಿಗಿಗೊಳಿಸುವುದು ಇತ್ಯಾದಿಗಳೆಲ್ಲ ಐ. ಎಂ. ಎಫ್. ಒಪ್ಪಂದದಲ್ಲಿ ಒಡ್ಡಲಾಗಿದ್ದ ಮತ್ತು ಸರಕಾರವು ಅಂಗೀಕರಿಸಿರುವ ಒಟ್ಟಾರೆ ಶರತ್ತುಗಳಲ್ಲಿ ಸೇರಿವೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಈ ವರ್ಷದ ಮುಂಗಡ ಪತ್ರದಲ್ಲಿ ಮೇಲಿನ ಅನೇಕ ಸಲಹೆಗಳು ಅಡಕವಾಗಿವೆ. ಮತ್ತು ಇವುಗಳು ಒಟ್ಟು ಪರಿಣಾಮದಲ್ಲಿ ಸಾಮಾನ್ಯ ಜನತೆಯ ಜೀವನ ವೆಚ್ಚದಲ್ಲಿ ಹೆಚ್ಚಳವುಂಟು ಮಾಡಿವೆ. ಕಳೆದ ವರ್ಷದ ಮುಂಗಡ ಪರಿಸ್ಥಿತಿಯೂ ಹೀಗೇ ಇತ್ತು.

ಎರಡು ಮುಂಗಡ ಪತ್ರಗಳ ನಡುವಿನ ಅವಧಿಯಲ್ಲೂ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಜೀವನ ವೆಚ್ಚ ಅಧಿಕವಾಗುವಂತೆ ಮಾಡಲಾಗುತ್ತಿದೆ. ಗ್ರಾಹಕ ಬೆಲೆ ಸೂಚ್ಯಾಂಕದಲ್ಲುಂಟಾದ ಏರಿಕೆಯಲ್ಲಿ ಇದನ್ನು ಕಾಣಬಹುದು. ಈಗಿನ ಕೇಂದ್ರ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಹಣದುಬ್ಬರದ ಪ್ರಮಾಣ ಇಳಿಮುಖವಾಗಿದೆಯೆನ್ನಲಾಗಿದೆ ಆದರೆ ಸಗಟು ಬೆಲೆ ಸೂಚ್ಯಾಂಕದ ಆಧಾರದ ಮೇಲೆ ಪರಿಶೀಲಿಸಿ ನೋಡಿದಾಗ ಈ ರೀತಿ ಹಣದುಬ್ಬರ ಇಳಿಮುಖವಾಗಿದೆಯೆನ್ನುವುದು ಶುದ್ಧ ಸುಳ್ಳು ಎನ್ನುವುದು ಗೊತ್ತಾದೀತು.

ಯೋಜನಾ ಆಯೋಗ ನಡೆಸಿದ ಆರನೇ ಪಂಚವಾರ್ಷಿಕ ಯೋಜನೆಯ ಮಧ್ಯಾಂತರ ಸಮೀಕ್ಷೆಯ ಪ್ರಕಾರ ಸರಕಾರದ ಮುಂದೆ ಇರುವ ಆಯ್ಕೆ ಎರಡೇ. ಒಂದೋ ತೆರಿಗೆ ಹೆಚ್ಚಳ ಮತ್ತು ರೈಲ್ವೇ, ವಿದ್ಯುತ್ತು, ಸಾರಿಗೆ, ನೀರಾವರಿ ಇತ್ಯಾದಿಗಳ ದರವನ್ನು ಹೆಚ್ಚಿಸುವ ಮೂಲಕ ರೂ. 10,000 ಕೋಟಿ ಅಧಿಕ ವರಮಾನ ಬರುವಂತೆ ಮಾಡುವುದು. ಇಲ್ಲವೇ ಯೋಜನೆಯ ವೆಚ್ಚದಲ್ಲಿ ಕಡಿತವುಂಟುಮಾಡುವುದು. ಇವು ಬಿಟ್ಟು ಬೇರೆ ದಾರಿ ಇಲ್ಲ.

ಆರ್ಥಿಕ ಮುಗ್ಗಟ್ಟು ತೀವ್ರವಾಗುತ್ತಿರುವುದರ ಇನ್ನೂ ಕೆಲವು ಲಕ್ಷಣಗಳು ಕಂಡು ಬಂದಿವೆ. ನಿರುದ್ಯೋಗ ಪ್ರಮಾಣದಲ್ಲಿ ಕಾಣಿಸಿಕೊಂಡಿರುವ ಅಗಾಧ ಹೆಚ್ಚಳ ಇವುಗಳಲ್ಲಿ ಮುಖ್ಯವಾದದ್ದು. ಉದ್ಯೋಗವಿನಿಮಯ ಕೇಂದ್ರಗಳ ದಾಖಲೆಗಳು ನಿರುದ್ಯೋಗ ಸಮಸ್ಯೆಯ ಸಂಪೂರ್ಣ ಚಿತ್ರವನ್ನು ಕೊಡುತ್ತಿಲ್ಲವಾದರೂ ಕಳೆದ ಒಂದು ವರ್ಷದಲ್ಲಿ ಹದಿನೇಳು ಲಕ್ಷದಷ್ಟು ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೊಸದಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿದ್ದಾರೆ. ನಿರುದ್ಯೋಗಿಗಳಾಗಿರುವವರೆಲ್ಲರೂ, ಅದರಲ್ಲೂ ಗ್ರಾಮಾಂತರ ಪ್ರದೇಶದ ಜನ ತಮ್ಮ ಹೆಸರನ್ನು ಉದ್ಯೋಗವಿನಿಮಯ ಕೇಂದ್ರಗಳಲ್ಲಿ ದಾಖಲಿಸಿಕೊಳ್ಳುವುದೇ ಇಲ್ಲ. ಹಾಗಾಗಿ ನಿರುದ್ಯೋಗ ಸಮಸ್ಯೆಯ ವಾಸ್ತವ ಚಿತ್ರ ಬೇರೆಯೇ ಇದೆ.

ಕಾರ್ಖಾನೆಗಳ ಕಾನೂನುಬಾಹಿರ ಮುಚ್ಚುವಿಕೆ, ಬೀಗಮುದ್ರೆ ಮತ್ತು ರಾಷ್ಟ್ರಾದ್ಯಂತ ನಡೆಯುತ್ತಿರುವ ಮುಷ್ಕರಗಳಿಂದ ನಿರುದ್ಯೋಗಿಗಳ ಸಂಖ್ಯೆ ಅಗಾಧ ಪ್ರಮಾಣದಲ್ಲಿ ಹೆಚ್ಚುತ್ತಲೇ ಇದೆ. ಕಳೆದ ಎಂಟು ತಿಂಗಳುಗಳಿಂದಲೂ ನಡೆಯುತ್ತಿರುವ ಮಹಾರಾಷ್ಟ್ರ ಗಿರಣಿ ಕಾರ್ಮಿಕರ ಮುಷ್ಕರ, ಪ. ಬಂಗಾಳದ ಸೆಣಬು ಕಾರ್ಖಾನೆಗಳನ್ನೂ ಸೇರಿದಂತೆ ಹಲವಾರು ಕಾರ್ಖಾನೆ, ಕೈಗಾರಿಕೆಗಳ ಮುಚ್ಚುವಿಕೆ ಇತ್ಯಾದಿಗಳೆಲ್ಲ ಸಮಸ್ಯೆ ಅದೆಷ್ಟು ಗಂಭೀರವಾಗಿದೆಯೆನ್ನುವುದನ್ನು ತೋರಿಸುತ್ತಿವೆ.

ರೈತಾಪಿ ಜನ, ಗ್ರಾಮಾಂತರ ಪ್ರದೇಶದ ಇತರ ಬಡ ಜನರು ಮತ್ತು ಮಧ್ಯಮ ವರ್ಗಗಳು ಸಹ ಎರಡೆರಡು ಕಡೆಗಳಿಂದ ಆಕ್ರಮಣಗಳನ್ನು ಎದುರಿಸುತಿದ್ದಾರೆ. ಒಂದೆಡೆ ಅವರ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತಿದೆ; ಇನ್ನೊಂದೆಡೆ ಅವರು ದಿನ ಬಳಕೆಯ ವಸ್ತುಗಳು ಮತ್ತು ಕೃಷಿಗೆ ಬೇಕಾದ ಗೊಬ್ಬರ ಇತ್ಯಾದಿ ವಸ್ತುಗಳಿಗಾಗಿ ದಿನೇ ದಿನೇ ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗುತ್ತಿದೆ. ಕೈಕಸಬುಗಾರರು ಮತ್ತು ಇತರ ಸಣ್ಣ ಪ್ರಮಾಣದ ಉತ್ಪಾದಕರ ಸ್ಥಿತಿಯೂ ಇದೇ ಆಗಿದೆ. ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆಗೆ ತನ್ನನ್ನು ಜೋಡಿಸಿಕೊಂಡಿರುವ ನಮ್ಮ ದೇಶದ ಮಾರುಕಟ್ಟೆ, ನಮ್ಮ ಸಣ್ಣ ಪ್ರಮಾಣದ ಮತ್ತು ಮಧ್ಯಮ ತರಗತಿಯ ಉತ್ಪಾದಕರನ್ನು ಜಾಗತಿಕ ಏಕಸ್ವಾಮ್ಯವಾದಿಗಳ ಶೋಷಣೆಗೆ ಗುರಿಪಡಿಸುತ್ತಿದೆ. ಭಾರತದ ಅರ್ಥಿಕತೆಯ ಮೇಲೆ ಅಂತರರಾಷ್ಟ್ರೀಯ ಏಕಸ್ವಾಮ್ಯವಾದಿಗಳ ಹಿಡಿತ ಬಿಗಿಯಾಗುತ್ತಲೇ ಇದೆ.

ಹೀಗಾಗಿ ಕೈಗಾರಿಕಾ ಕಾರ್ಮಿಕರು, ಕೃಷಿ ಕಾರ್ಮಿಕರು, ರೈತರು, ಮಧ್ಯಮವರ್ಗದ ನೌಕರರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೋದ್ಯಮಿಗಳು ಇವರೆಲ್ಲ ತಮ್ಮ ಉಳಿವಿಗಾಗಿ ಹೋರಾಡಬೇಕಾದುದು ಅಗತ್ಯವಾಗಿಬಿಟ್ಟಿದೆ. ಇವರೆಲ್ಲರೂ ಪ್ರತ್ಯೇಕವಾಗಿಯೂ ಮತ್ತು ಎಲ್ಲರ ಜೊತೆ ಸೇರಿ, ಸ್ಥಳೀಯವಾಗಿ ಕೈಗಾರಿಕೆಗಳಲ್ಲಿ ಅಥವಾ ಉತ್ಪಾದಕ ಘಟಕದ ಹಂತದಲ್ಲಿ ಜಿಲ್ಲಾವಾರು ಮತ್ತು ಪ್ರಾಂತವಾರು ಹಾಗೂ ರಾಷ್ಟ್ರವ್ಯಾಪಿಯಾಗಿಯೂ ತಮ್ಮನ್ನು ಸಂಘಟಿಸಿಕೊಂಡು, ಸರಕಾರವು ತನ್ನ ಧೋರಣೆಗಳನ್ನು ಬದಲಾಯಿಸುವಂತೆ ಹೋರಾಡಬೇಕು. ಈ ದೃಷ್ಟಿಯಿಂದಲೇ ವಿವಿಧ ಕಾರ್ಮಿಕ ಸಂಘಗಳು ಮತ್ತು ಅಖಿಲ ಭಾರತ ಮಟ್ಟದ ಫೆಡರೇಶನ್‌ಗಳು ಒಂದಾಗಿ 'ರಾಷ್ಟ್ರೀಯ ಹೋರಾಟ ಸಮಿತಿ' ಯೊಂದನ್ನು ರಚಿಸಲು ಮುಂದಾಗಿವೆ. ಜನವರಿ 19, 1982 ರಂದು ಅಖಿಲ ಭಾರತ ಮಟ್ಟದ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಯಾಗಿ ಸಂಘಟಿಸಿರುವ ಈ ಸಮಿತಿ ಸಮಾನ ಆಸಕ್ತಿಯಿರುವ ಹಲವಾರು ಪ್ರಶ್ನೆಗಳಲ್ಲಿ ಸಂಯುಕ್ತ ಹೋರಾಟವನ್ನು ಮುಂದುವರಿಸುತ್ತಿದೆ.

ಕಾರ್ಮಿಕ ವರ್ಗದ ಹೋರಾಟಗಳು :

ಮುಂಬಯಿ ಗಿರಣಿ ಕಾರ್ಮಿಕರ ಮುಷ್ಕರ ಎಂಟು ತಿಂಗಳನ್ನು ದಾಟಿದೆ. ಕೋಟಿಗಟ್ಟಲೆ ರೂಪಾಯಿಗಳನ್ನು ಲಾಭವಾಗಿ ಗಳಿಸುತ್ತಿದ್ದ ಮಿಲ್ ಮಾಲೀಕರು, ಕಾರ್ಮಿಕರ ನ್ಯಾಯೋಚಿತ ಬೇಡಿಕೆಗಳನ್ನು ಈಡೇರಿಸಲು ಸರ್ವಥಾ ಒಪ್ಪುತ್ತಿಲ್ಲ. ಇದೀಗ ಸರಕಾರದ ಸಂಪೂರ್ಣ ಬೆಂಬಲವೂ ಅವರಿಗೆ ದೊರೆತಿದೆ. ಮುಷ್ಕರ ಇನ್ನೂ ಮುಂದುವರಿಯುತ್ತಿರುವುದಕ್ಕೆ 'ಇಂಟಕ್'ಗೆ ಸೇರ್ಪಡೆಯಾಗಿರುವ ರಾಷ್ಟ್ರೀಯ ಮಿಲ್ ಮಜದೂರ್ ಸಂಘವನ್ನು ಮಾನ್ಯತೆ ಪಡೆದಿರುವ ಸಂಘವೆಂಬುದಾಗಿ ಸರಕಾರವು ಪಟ್ಟು ಹಿಡಿದು ಕುಳಿತಿರುವುದೇ ಮುಖ್ಯ ಕಾರಣ. ಆದರೆ ಈ ಸಂಘಕ್ಕೆ ಕಾರ್ಮಿಕರ ಬೆಂಬಲ ಎಳ್ಳಷ್ಟು ಇಲ್ಲವೆನ್ನುವುದನ್ನು ಈಗಲೂ ಮುಂದುವರಿಯುತ್ತಿರುವ ಮುಷ್ಕರ ಸಾಬೀತುಪಡಿಸಿದೆ.

ಪಶ್ಚಿಮ ಬಂಗಾಳದಲ್ಲಿ ಸೆಣಬು ಕಾರ್ಖಾನೆಗಳ ಕಾರ್ಮಿಕರು ತಮ್ಮ ಒಪ್ಪಂದವನ್ನು ಜ್ಯಾರಿಗೊಳಿಸುವುದಕ್ಕಾಗಿಯೇ ಒಂದು ದಿನದ ಮುಷ್ಕರ ನಡೆಸಬೇಕಾಯಿತು. ಕೇಂದ್ರ ಸರಕಾರದಿಂದ ತಾವು ಪಡೆದಿರುವ ರೂ. 300 ಕೋಟಿಯನ್ನು ಅಪವ್ಯಯ ಮಾಡಿರುವ ಮಿಲ್ ಮಾಲಿಕರು, ತಮ್ಮ ಕಾರ್ಖಾನೆಗಳನ್ನು ಹಂತ ಹಂತವಾಗಿ ಮುಚ್ಚಿಸಲು ಅವಕಾಶಕೊಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಇದು ಅವರು ಕಾರ್ಮಿಕರ ಮೇಲೆ ನಡೆಸುತ್ತಿರುವ ಆಕ್ರಮಣ.

ಸಾರ್ವಜನಿಕ ಕ್ಷೇತ್ರದ ವಿಷಯದಲ್ಲಂತೂ ಆಳುವ ವರ್ಗಗಳು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ ಮೂಲಕ ನೌಕರರ ವೇತನ ಮತ್ತು ತುಟ್ಟಿಭತ್ತೆಯ ಮೇಲೆ ನಿಯಂತ್ರಣ ಹೇರಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಅತಿರೇಕಗಳ ವಿರುದ್ಧ ಬಿ. ಇ. ಹೆಚ್. ಎಲ್. ಉಕ್ಕು ಉದ್ಯಮ ಮತ್ತು ಕಲ್ಲಿದ್ದಲು ಉದ್ಯಮಗಳ ನೌಕರರು ಈಗಾಗಲೇ ಸಮಾವೇಶಗಳನ್ನು ನಡೆಸಿ ತಮ್ಮ ವೇತನ ಇತ್ಯಾದಿಗಳನ್ನು ಸಂರಕ್ಷಿಸಿಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಇದೇ ಉದ್ದೇಶಕ್ಕಾಗಿ ಅಕ್ಟೋಬರ್ ತಿಂಗಳಲ್ಲಿ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ನೌಕರರ ಸಮಾವೇಶವೊಂದು ನಡೆಯಲಿದೆ.

'ಇಂಟಕ್' ಅನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಟ್ರೇಡ್ ಯೂನಿಯನ್‌ಗಳು, ಫೆಡರೇಶನ್‌ಗಳು ಹಾಗೂ ಮಧ್ಯಮ ವರ್ಗದ ನೌಕರರನ್ನೊ ಒಳಗೊಂಡಿರುವ ಟ್ರೇಡ್ ಯೂನಿಯನ್‌ಗಳ ರಾಷ್ಟ್ರೀಯ ಹೋರಾಟ ಸಮಿತಿಯು ಇಂತಹ ಸಮಾವೇಶಗಳನ್ನು ಸಂಘಟಿಸುತ್ತಿದೆ ಮಾತ್ರವಲ್ಲ ಸಾರ್ವಜನಿಕ ಕ್ಷೇತ್ರದ ನೌಕರರು ಮತ್ತು ಕಾರ್ಮಿಕರ ಹೋರಾಟಗಳಿಗೆ ಮುಂದಾಳುತ್ವವನ್ನೂ ನೀಡುತ್ತಿದೆ. ಮುಷ್ಕರದಲ್ಲಿರುವ ಗಿರಣಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಳಂಬ ಮಾಡುವ ಒಂದೇ ಉದ್ದೇಶದಿಂದ ಕರೆಯಲಾಗಿದ್ದ ಬಟ್ಟೆ ಉದ್ಯಮಕ್ಕೆ ಸಂಬಂಧಿಸಿದ ತ್ರಿಪಕ್ಷೀಯ ಸಮಿತಿಯ ಸಭೆಯನ್ನು ರಾಷ್ಟ್ರೀಯ ಹೋರಾಟ ಸಮಿತಿ ನ್ಯಾಯವಾಗಿಯೇ ವಿರೋಧಿಸಿದೆ. ಸರಕಾರವು ಕರೆದಿದ್ದ ಕಾರ್ಮಿಕ ಸಮ್ಮೇಳನವನ್ನೂ ತೀರಾ ನ್ಯಾಯಬದ್ಧ ಕಾರಣಗಳಿಗಾಗಿ ರಾಷ್ಟ್ರೀಯ ಹೋರಾಟ ಸಮಿತಿಯು ಬಹಿಷ್ಕರಿಸಿದೆ. ಕಾರ್ಮಿಕ ವರ್ಗ ಮತ್ತು ಟ್ರೇಡ್ ಯೂನಿಯನ್ ಸಂಘಟನೆಗಳು ಅಪಾರ ತ್ಯಾಗಮಾಡಿ ಗಳಿಸಿದ್ದ ಅನೇಕ ಹಕ್ಕುಗಳನ್ನೂ, ಸಾಮೂಹಿಕ ಚೌಕಾಸಿ, ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮುಷ್ಕರದ ಹಕ್ಕನ್ನು ಒಂದೇ ಏಟಿಗೆ ಕಿತ್ತುಕೊಂಡಿರುವ ಕೈಗಾರಿಕಾ ವಿವಾದ

(೬ನೇ ಪುಟ ನೋಡಿ)

ನೆರೆ ಹೊರೆ

ಪಂಜಾಬ್ :

ಎನ್. ಟಿ. ಸಿ. ಕಚೇರಿಯೆದುರು ಗಿರಣಿ ಕಾರ್ಮಿಕರ ಧರಣಿ

ಬಂಡವಾಳಶಾಹೀ ಮಾಲೀಕರು ಬೇಕೆಂದೇ ರೋಗಗ್ರಸ್ತಗೊಳಿಸಿದ ಬಟ್ಟೆ ಗಿರಣಿಗಳನ್ನು ಸರಕಾರ ವಹಿಸಿಕೊಂಡಾಗ ಅವು ರಾಷ್ಟ್ರೀಯ ಜವಳಿ ಕಾರ್ಪೋರೇಷನ (ಎನ್.ಟಿ.ಸಿ.) ಆಡಳಿತಕ್ಕೊಳಪಡುತ್ತವೆ. ಇಂತಹ ಗಿರಣಿಗಳು ನಂತರ ಮೊದಲಿನಂತೆ ಸರಿಯಾಗಿ ಕಾರ್ಯನಿರ್ವಹಿಸಲಾರಂಭಿಸಿದರೂ ಕೂಡಾ ಅದನ್ನು ರೋಗಗ್ರಸ್ತ ಘಟಕಗಳೆಂದೇ ಪರಿಗಣಿಸಿ ಅಲ್ಲಿಯ ಕಾರ್ಮಿಕರನ್ನು ಯೋಗ್ಯ ವೇತನ ಹಾಗೂ ಇತರ ಸೌಲಭ್ಯಗಳಿಂದ ವಂಚಿಸಲಾಗುತ್ತಿದೆ. ಈ ರೀತಿಯ ಶೋಷಣೆಗೆ ಹಾಗೂ ವಂಚನೆಗೆ ಗುರಿಯಾದ ಪಂಜಾಬ್ ಗಿರಣಿ ಕಾರ್ಮಿಕರು ಅಕ್ಟೋಬರ್ 5 ರಂದು ದಿಲ್ಲಿಯಲ್ಲಿರುವ ಎನ್. ಟಿ. ಸಿ. ಯ ದಿಲ್ಲಿ, ಪಂಜಾಬ್ ಹಾಗೂ ರಾಜಾಸ್ಥಾನ ಕ್ಷೇತ್ರದ ಕಛೇರಿಯೆದರು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಿದರು. ದಿಲ್ಲಿ ಹಾಗೂ ಹರಿಯಾಣಾದ ಗಿರಣಿ ಕಾರ್ಮಿಕರೂ ಕೆಲವರು ಇದರಲ್ಲಿ ಭಾಗವಹಿಸಿದ್ದರು. ದಿಲ್ಲಿಯ ಗಿರಣಿ ಕಾರ್ಮಿಕರಿಗಿಂತ ರಾಜಸ್ಥಾನ ಕಾರ್ಮಿಕರ ವೇತನ, ಸೌಲಭ್ಯ ಕಡಿಮೆ; ಪಂಜಾಬ್‌ನ ಕಾರ್ಮಿಕರದು ಮತ್ತಷ್ಟು ಕಡಿಮೆ. ಪಂಜಾಬ್‌ನ ಗಿರಣಿ ಕಾರ್ಮಿಕರು ಈ ಶೋಷಣೆಯ ವಿರುದ್ಧ ಹೋರಾಟ ನಡೆಸುತ್ತಾ ಬಂದಿದ್ದರು. ಸೆಪ್ಟೆಂಬರ್ 12ರಂದು ಖರಾರ್‌ನಲ್ಲಿ ನಡೆದ ಸಮಾವೇಶದಲ್ಲಿ ಹೋರಾಟದ ಮುಂದಿನ ಹಂತವಾಗಿ ಧರಣಿ ನಡೆಸಲು ನಿರ್ಧರಿಸಲಾಗಿತ್ತು. ಎನ್. ಟಿ. ಸಿ. ಯ ಅಧ್ಯಕ್ಷರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಸಿ. ಐ. ಟಿ. ಯು ಪಂಜಾಬಿನ ಗಿರಣಿ ಕಾರ್ಮಿಕರ ಶೋಷಣೆ ನಡೆಯುತ್ತಿರುವ ಬಗ್ಗೆ, ಸೌಲಭ್ಯಗಳಿಂದ ಅವರನ್ನು ವಂಚಿಸುತ್ತಿರುವ ಬಗ್ಗೆ ವಿವರವಾಗಿ ತಿಳಿಸಿತ್ತು.

ಕೇರಳ:

ಕಾಲೇಜು ಚುನಾವಣೆಗಳಲ್ಲಿ ಎಸ್. ಎಫ್. ಐ. ಗೆ ಉತ್ತಮ ಫಲಿತಾಂಶ

ಕೇರಳದ ವಿಶ್ವವಿದ್ಯಾನಿಲಯ ಹಾಗೂ ಕೋಝಿಕೋಡ್ ವಿಶ್ವವಿದ್ಯಾನಿಲಯಗಳಿಗೆ ಸೇರಿದ ಕಾಲೇಜುಗಳಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಎಸ್. ಎಫ್. ಐ. ನೇತೃತ್ವದ ರಂಗ ಕಳೆದ ಚುನಾವಣೆಗಳಲ್ಲಿ ಕಳೆದುಕೊಂಡ ಕಾಲೇಜು ಯೂನಿಯನ್‌ಗಳನ್ನು ಮತ್ತೆ ಪಡೆದುಕೊಂಡು ಉತ್ತಮ ಗೆಲುವನ್ನು ಸಾಧಿಸಿದೆ. 120 ಕಾಲೇಜುಗಳಲ್ಲಿ ಚುನಾವಣೆ ನಡೆದಿದ್ದು ಅವುಗಳಲ್ಲಿ ಎಸ್. ಎಫ್. ಐ. ನೇತೃತ್ವದ ರಂಗ ಜಯಗಳಿಸಿದೆ. ಕೆ. ಎಸ್. ಯು (ಐ)ಗೆ ಆಲೆಪ್ಪಿ ಜಿಲ್ಲೆಯ ಪೂರ್ವಭಾಗ ಹಾಗೂ ಕೊಟ್ಟಾಯಂ ಜಿಲ್ಲೆಯ ಉತ್ತರ-ಪೂರ್ವ ಭಾಗದಲ್ಲಿ ಮಾತ್ರ ಸ್ವಲ್ಪ ಮಟ್ಟಿನ ಗೆಲುವು ಸಿಕ್ಕಿದೆ. ಕ್ವಿಲಾನ್‌ನ ಎಸ್ ಎನ್. ಕಾಲೇಜಿನ ಎಲ್ಲಾ ಸೀಟುಗಳನ್ನು ಎಸ್. ಎಫ್. ಐ ಗೆದ್ದುಕೊಂಡಿದೆ. ಇಲ್ಲಿ ಕಳೆದ ವರ್ಷ ಎಸ್. ಎಫ್. ಐ ನ ನಾಯಕ ಶ್ರೀಕುಮಾರ್‌ರವರನ್ನು ಆರೆಸ್ಸೆಸ್ಸಿಗರು ಅಮಾನುಷವಾಗಿ ಕೊಂದಿದ್ದರು.

ಅಝೀಕೋಡನ್ ರಾಘವನ್‌ಗೆ ಶ್ರದ್ಧಾಂಜಲಿ

10 ವರ್ಷಗಳ ಹಿಂದೆ ಸೆ. 23 ರಂದು ಅತೀ ಎಡಪಂಥೀಯ ಅರಾಜಕರಣವಾದಿಗಳು ಹಾಗೂ ಆಗಿನ ಆಳುವ ಪಕ್ಷದ ಸಂಚಿಗೆ ಬಲಿಯಾದ ಅಝೀಕೋಡನ್ ರಾಘವನ್‌ರವರಿಗೆ ಸೆಪ್ಟಂಬರ್ 23ರಂದು ಕೇರಳದಾದ್ಯಂತ ಶ್ರದ್ಧಾಂಜಲಿ ಅರ್ಪಿಸಲಾಯಿತು. ತ್ರಿಚೂರ್ ಜಿಲ್ಲೆಯ ಚೆಟ್ಟಿಯಂಗಡಿಯಲ್ಲಿ ರಾಘವನ್‌ರ ಮೇಲೆ ಅಮಾನುಷ ಹಲ್ಲೆ ನಡೆದು ಕೊಲೆ ನಡೆದ ಜಾಗದಲ್ಲಿ ಕಾರ್ಮಿಕರು ಹಾಗೂ ಪಕ್ಷದ ಕಾರ್ಯಕರ್ತರು ಶ್ರದ್ಧಾಂಜಲಿ ಅರ್ಪಿಸಿದರು. ಕಣ್ಣಾನೂರಿನ ಪಯ್ಯಂಬಳಂ ಸಮುದ್ರ ತೀರದಲ್ಲಿ ನಡೆದ ಸಭೆಯಲ್ಲಿ ಇ. ಕೆ. ನಯನಾರ್ ಹಾಗೂ ರಾಘವನ್‌ರ ಮಕ್ಕಳು ಶ್ರದ್ಧಾಂಜಲಿ ಅರ್ಪಿಸಿದರು. ಇಲ್ಲಿ ರಾಘವನ್‌ರಿಗೆ ಹತ್ತು ವರ್ಷಗಳ ಹಿಂದೆ ಅಂತಿಮ ವಿದಾಯ ಸಲ್ಲಿಸಲಾಗಿತ್ತು.

ಮಹಾರಾಷ್ಟ್ರ :

ದಬ್ಬಾಳಿಕೆಯಿಂದ ಮುಂಬೈ ಕಾರ್ಮಿಕರ ಹೋರಾಟ ಮುರಿಯಲು ಯತ್ನ

ಬಹಳ ದಿನಗಳಿಂದ ನಡೆಯುತ್ತಿರುವ ಮುಂಬೈ ಗಿರಣಿ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಅಕ್ಟೋಬರ್ 11 ರಿಂದ ಕೆಲಸ ನಿಲ್ಲಿಸಿರುವ ಮುಂಬೈ ಕಾರ್ಮಿಕರ ಮೇಲೆ ಮಹಾರಾಷ್ಟ್ರ ಸರಕಾರ ದಮನಕಾರೀ ಕ್ರಮಗಳನ್ನು ಕೈಗೊಂಡಿದೆ. ಗಿರಣಿ ಕಾರ್ಮಿಕರ ಮುಷ್ಕರದ ನಾಯಕರೊಂದಿಗೆ ಮಾತುಕತೆ ನಡೆಸಲು ನಿರಾಕರಿಸಿ ಮಹಾರಾಷ್ಟ್ರ ಸರಕಾರ ಹಾಗೂ ಭಾರತ ಸರಕಾರ ಕಾರ್ಮಿಕರ ಬಗ್ಗೆ ತಮ್ಮ ತೀವ್ರ ಅಸಂತೋಷವನ್ನು ವ್ಯಕ್ತಪಡಿಸಿರುವುದರ ಪರಿಣಾಮವಾಗಿ ಮುಂಬೈ ಕಾರ್ಮಿಕರಲ್ಲಿ ತೀವ್ರ ಅಸಂತೋಷ ವ್ಯಾಪಿಸಿದೆ. ತಮ್ಮ ನಾಯಕತ್ವವನ್ನು ತಾವೇ ಆರಿಸಿಕೊಳ್ಳುವ, ಸಾಮೂಹಿಕ ಚೌಕಾಸಿ ನಡೆಸುವ ಕಾರ್ಮಿಕರ ಹಕ್ಕಿಗೆ ಮನ್ನಣೆ ಕೊಡುವುದರ ಬದಲು ತನ್ನ ಪೂರ್ವ ನಿರ್ಧಾರಿತ ಧೋರಣೆಗಳನ್ನು ಹಾಗೂ ನಿರ್ಧಾರಗಳನ್ನು ಕಾರ್ಮಿಕರ ಮೇಲೆ ಹೇರಬೇಕೆಂಬ ಈ ಸರಕಾರಗಳ ಬಯಕೆಯಿಂದಾಗಿ ಪರಿಸ್ಥಿತಿ ಈಗ ತೀರಾ ಹದಗೆಟ್ಟಿದೆ. ಕಾರ್ಮಿಕರನ್ನು ಉಪವಾಸ ಕೆಡವಿ ಉಪಾಯವಿಲ್ಲದೆ ಅವರು ತಲೆ ಬಗ್ಗಿಸಬಹುದು ಎಂಬ ಈ ಸರಕಾರಗಳ ನಿರೀಕ್ಷೆ ಸುಳ್ಳಾದ ಮೇಲೆ ಈಗ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸಿ ತಮ್ಮ ಬಯಕೆ ಈಡೇರಿಸಿಕೊಳ್ಳುವ ಹವಣಿಕೆ ಈ ಸರಕಾರಗಳಿಗಿರುವಂತಿದೆ. ಆದ್ದರಿಂದಲೇ ಅಕ್ಟೋಬರ್ 11 ರಂದು ಹನ್ನೊಂದು ಸಾವಿರ ಕಾರ್ಮಿಕರನ್ನು ಬಂಧಿಸಿ ಈಗ 'ತೆರೆದ ಜೈಲು' ಎಂಬ ಯಾವ ಮೂಲಭೂತ ಸೌಲಭ್ಯಗಳೂ ಇಲ್ಲದ ಜೇಲುಗಳಲ್ಲಿ ಅವರನ್ನು ತುರುಕಲಾಗಿದೆ.

ಅಮಾನುಷ ಕ್ರಮವನ್ನು ಕಾರ್ಮಿಕರು ಪ್ರತಿಭಟಿಸಿದಾಗ ಅವರ ಮೇಲೆ ಪೋಲಿಸರು ಗುಂಡು ಹಾರಿಸಿದರು.

ಸಿ ಐ ಟಿ ಯು ನ ಅಧ್ಯಕ್ಷ ಬಿ ಟಿ. ರಣದಿವೆ ಹಾಗೂ ಪ್ರಧಾನ ಕಾರ್ಯದರ್ಶಿ ಪಿ ರಾಮಮೂರ್ತಿಯವರು ಅಕ್ಟೋಬರ್ 12 ರಂದು ಇತ್ತ ಹೇಳಿಕೆಯಲ್ಲಿ ಈ ದಮನ ಕ್ರಮಗಳನ್ನು ತೀವ್ರವಾಗಿ ಖಂಡಿಸಿ ಸರಕಾರದ ಈ ದಮನಕಾರೀ ಧೋರಣೆಯ ವಿರುದ್ಧ ಪ್ರತಿಭಟನೆಯ ಕೂಗೆಬ್ಬಿಸುವಂತೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡಿದ್ದಾರೆ.

ತಮಿಳುನಾಡು :

ಸರಕಾರಿ ಅಧಿಕಾರದ ದುರುಪಯೋಗದಿಂದ ಪೆರಿಯಾಕುಳಂನಲ್ಲಿ ಗೆಲುವು

ಇತ್ತೀಚೆಗೆ ಪೆರಿಯಾಕುಳಂನಲ್ಲಿ ಲೋಕ ಸಭೆಗೆ ನಡೆದ ಉಪ ಚುನಾವಣೆ ಸಮಯದಲ್ಲಿ ಕೆಲವು ಹೊಸ ರಸ್ತೆಗಳು ಈ ಕ್ಷೇತ್ರದಲ್ಲಿ ರೂಪ ತಳೆದವು; ಹೊಸ ವಿದ್ಯುತ್ ಸಂಪರ್ಕಗಳ ಹಾಗೂ ಕೊಳವೆ ಬಾವಿಗಳ ಆಶ್ವಾಸನೆಯನ್ನು ಜನ ಪಡೆದರು; ಕೆಲವಂತೂ ನಿಜವಾಗಿಯೂ ಕಾರ್ಯಗತವಾದವು. ಶಾಲಾ ಮಕ್ಕಳಿಗೆ ಪೋಷಕ ಆಹಾರ ಯೋಜನೆಯ ಭರೀ ಪ್ರಚಾರ ನಡೆಯಿತು. ಸಾವಿರಕ್ಕೂ ಹೆಚ್ಚು ಎ.ಐ.ಎ.ಡಿ.ಎಂ.ಕೆ. ಕಾರುಗಳು ಪೆರಿಯಾಕುಳಂನಲ್ಲಿ ಓಡಾಡುತ್ತಿದ್ದವು. ಸಂಪೂರ್ಣ ಮಂತ್ರಿ ಮಂಡಲವೇ ತಮ್ಮೆಲ್ಲ ಅಧಿಕಾರೀ ಪರಿವಾರಗಳೊಂದಿಗೆ ಪೆರಿಯಾಕುಳಂನಲ್ಲಿ ಠಿಕಾಣಿ ಮಾಡಿತ್ತು. ಈ ರೀತಿ ಎಲ್ಲಾ ಚುನಾವಣಾ ನಿಯಮಗಳನ್ನು ಮುರಿದು ಎ.ಐ.ಎ.ಡಿ.ಎಂ.ಕೆ. ಚುನಾವಣೆಯಲ್ಲಿ ಗೆದ್ದು ಬಂದಿತು.

ಜನ ಸಾಮಾನ್ಯರ ಜೀವನದ ಎಲ್ಲಾ ಅಂಶಗಳ ಮೇಲೆ ತೀವ್ರ ದುಷ್ಪರಿಣಾಮ ಬೀರಿರುವ ಕೇಂದ್ರದ ಕಾಂಗ್ರೆಸ್ (ಐ)ನ ಜನ ವಿರೋಧೀ ಧೋರಣೆಗಳನ್ನೇ ರಾಜ್ಯದಲ್ಲಿ ಅನುಸರಿಸುತ್ತಿರುವ ಎ.ಐ.ಎ ಡಿ. ಎಂ.ಕೆ. ಹಾಗೂ ಎಂ.ಜಿ.ಆರ್. ಸರಕಾರವನ್ನು ವಿರೋಧಿಸುತ್ತಿದ್ದರೂ ಕೇಂದ್ರ ಸರಕಾರವನ್ನು ಸದಾ ಬೆಂಬಲಿಸುತ್ತಿರುವ ಡಿ ಎಂ ಕೆ., ತಮಿಳುನಾಡಿನ ಈ ಎರಡು ಪಕ್ಷಗಳು ಈ ಉಪ ಚುನಾವಣೆಯನ್ನು ಕೇವಲ ಎಂ. ಜಿ. ಆರ್. ಹಾಗೂ ಕರುಣಾನಿಧಿ ನಡುವಣ ವೈಯಕ್ತಿಕ ಕಿತ್ತಾಟವನ್ನಾಗಿ ಪರಿವರ್ತಿಸಿದ್ದರಿಂದ ಜನರನ್ನು ಆಳವಾಗಿ ಬಾಧಿಸುತ್ತಿರುವ ಸಮಸ್ಯೆಗಳೆಲ್ಲಾ ಹಿಂದಕ್ಕೆ ಸರಿದವು. ಡಿ. ಎಂ. ಕೆ, ಅಣ್ಣಾ ಡಿ ಎಂ.ಕೆ. ಹಾಗೂ ಕಾಂಗ್ರೆಸ್ (ಐ) ಮಟ್ಟಿಗೆ ಅಪಾರ ಹಣವೆಚ್ಚ ಮಾಡುವ ಪೈಪೋಟಿಯಾಯಿತು ಈ ಚುನಾವಣೆ.

ಇಂತಹ ಸಂದರ್ಭದಲ್ಲಿ ಜನತೆಯೆದುರು ಒಂದು ಪರ್ಯಾಯ ಕಾರ್ಯಕ್ರಮವನ್ನು ಇಡುವ ಉದ್ದೇಶದಿಂದ ಸಿ.ಪಿ.ಐ. (ಎಂ), ಸಿ. ಪಿ ಐ ಹಾಗೂ ಇನ್ನೂ ಕೆಲವು ಪ್ರಜಾಪ್ರಭುತ್ವವಾದೀ ಪಕ್ಷಗಳು ಸೇರಿಕೊಂಡು ಪ್ರಜಾಪ್ರಭುತ್ವ ರಕ್ಷಣಾ ರಂಗದ ನೆರವಿನಿಂದ ಸಿ ಪಿ. ಐ. (ಎಂ) ಈ ಉಪ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಮೇಲೆ ತಿಳಿಸಿದಂತೆ ಇದು ಎಂ. ಜಿ. ಆರ್. ಹಾಗೂ ಕರುಣಾನಿಧಿ ನಡುವಣ ವೈಯಕ್ತಿಕ ತಿಕ್ಕಾಟವಾಗಿ ಪರಿಣಮಿಸಿದ್ದರಿಂದ ಸಿ.ಪಿ.ಐ. (ಎಂ) ಹಾಗೂ ಅದರ ಮಿತ್ರ ಪಕ್ಷಗಳಿಗೆ ಜನರ ಸಮಸ್ಯೆಗಳತ್ತ ಜನತೆಯ ಗಮನಸೆಳೆಯುವುದು ಸ್ವಲ್ಪ ಕಷ್ಟವೇ ಆಯಿತು. ಆದರೂ ಸಿ ಪಿ.ಐ (ಎಂ) ನಾಯಕರು ಭಾಷಣ ಮಾಡಿದಲ್ಲೆಲ್ಲಾ ಅಪಾರ ಜನಸಂದಣಿ ನೆರೆಯುತ್ತಿತ್ತು. ಇವರಲ್ಲಿ ಕೇವಲ ಕೆಲವರೇ ಸಿ. ಪಿ. ಐ. (ಎಂ)ಗೆ ಮತ ನೀಡಿದವರು ಎಂದು ಚುನಾವಣಾ ಫಲಿತಾಂಶ ತಿಳಿಸುವುದಾದರೂ ಮುಂಬರುವ ದಿನಗಳಲ್ಲಿ ಇವರಲ್ಲಿ ಬಹಳಷ್ಟು ಮಂದಿ ಸಿ.ಪಿ.ಐ.(ಎಂ) ಈ ಚುನಾವಣೆಯಲ್ಲಿ ಪ್ರಚಾರ ಮಾಡಿದ ಕಾರ್ಯಕ್ರಮಗಳತ್ತ ಆಕರ್ಷಿತರಾಗುತ್ತಾರೆ ಎಂದು ಭಾವಿಸಲು ಬಹಳಷ್ಟು ಕಾರಣಗಳಿವೆ ಎಂದು ಸಿ ಪಿ.ಐ. (ಎಂ) ತಮಿಳುನಾಡು ರಾಜ್ಯ ಸಮಿತಿಯ ಕಾರ್ಯಕಾರೀ ಮಂಡಳಿ ಭರವಸೆ ವ್ಯಕ್ತಪಡಿಸಿದೆ.

ಅಧ್ಯಾಪಕರ ಮುಷ್ಕರಕ್ಕೆ ಬೆಂಬಲ

ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಅಧ್ಯಾಪಕರು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ರಾಜ್ಯ ಸರ್ಕಾರದ ಹಣಕಾಸು ಮಂತ್ರಿಯವರ ಆಶ್ವಾಸನೆಯ ಮೇರೆಗೆ ಚಳುವಳಿಯನ್ನು ನಿಲ್ಲಿಸಿದ್ದ ಅಧ್ಯಾಪಕರು ಈಗ ಪುನಃ ಮುಷ್ಕರಕ್ಕಿಳಿಯಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ಹಣಕಾಸು ಮಂತ್ರಿಯವರು ಸೂಚಿಸಿರುವ ಪರಿಹಾರವು ಅಧ್ಯಾಪಕರ ಮೂಲಭೂತ ಬೇಡಿಕೆಗಳಿಗೆ ಸಮರ್ಪಕವಾಗಿಲ್ಲ. ಸ್ನಾತಕೋತ್ತರ ಅಧ್ಯಾಪಕರ ಬೇಡಿಕೆಗಳನ್ನು ತಕ್ಷಣ ಈಡೇರಿಸುವಂತೆ ಸಿ. ಪಿ. ಐ. (ಎಂ) ಕಾರ್ಯದರ್ಶಿ ಮಂಡಳಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಎಸ್ ಎಫ್ ಐ: ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ। ಎಸ್. ಆರ್. ಆರಾಧ್ಯ ಅವರು ಹೇಳಿಕೆಯೊಂದನ್ನು ಹೊರಡಿಸಿ ಅಧ್ಯಾಪಕರ ಮುಷ್ಕರವನ್ನು ಬೆಂಬಲಿಸಿದ್ದಾರೆ.

ದಿನಾಂಕ 21-10-82 ರಂದು ಧಾರವಾಡದ ಕೆ ವಿ. ವಿ. ಆವರಣದಲ್ಲಿ ಶಿಕ್ಷಕರ ಮೆರವಣಿಗೆ ನಡೆಯಿತು. ನಂತರ ನಡೆದ ಬೃಹತ್ ಸಭೆಯಲ್ಲಿ ಎಸ್. ಎಫ್. ಐ ನ ಕಾಂ। ಶಿವಶಂಕರಯ್ಯ ಡ್ರಾವಿಯವರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಮಾತನಾಡಿ ಸರಕಾರ ಕೂಡಲೇ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಇಲ್ಲವಾದಲ್ಲಿ ಶಿಕ್ಷಕರ ಜೊತೆಗೆ ವಿದ್ಯಾರ್ಥಿಗಳೂ ಹೋರಾಟ ಕೈಗೊಳ್ಳಬೇಕಾದೀತೆಂದು ಎಚ್ಚರಿಸಿದರು.

○

ಅಂತರ್ರಾಷ್ಟ್ರೀಯ

ಚೀಣಾ - ಸೋವಿಯೆತ್ ಸಂಬಂಧಗಳು

ಜಗತ್ತಿನ ಅತೀ ದೊಡ್ಡ ಆಳುವ ಕಮ್ಯುನಿಸ್ಟ್ ಪಕ್ಷಗಳು ಹಾಗೂ ಸಮಾಜವಾದೀ ಪ್ರಭುತ್ವಗಳಾದ ಸೋವಿಯೆತ್ ಸಮಾಜವಾದೀ ಗಣರಾಜ್ಯಗಳ ಸಂಘ (ಯು.ಎಸ್.ಎಸ್.ಆರ್.) ಹಾಗೂ ಚೀಣಾದ ಜನತಾ ಗಣತಂತ್ರವಿವೆರಡರ ನಡುವಣಸಂಬಂಧಗಳು ಹದಗೆಟ್ಟು, ಕಲಹದ ರೂಪ ಪಡೆದು, ಪರಸ್ಪರ ವೈರಭಾವದ ಹಂತ ತಲುಪಿ ಇಂದಿಗೆ ಇಪ್ಪತ್ತು ವರ್ಷಗಳೂ ಮಿಕ್ಕಿದವು. ಈ ಬೇಸರದ ಸಂಗತಿಗೆ ಜವಾಬ್ದಾರರು ಯಾರಾರು, ಎಷ್ಟೆಂದು ಲೆಕ್ಕಹಾಕುವುದಾಗಲೀ, ಈ ದುರಂತಮಯ ವಿಭಜನೆಯ ಹಿಂದಿರುವ ರಾಜಕೀಯ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದಾಗಲೀ ಈಗ ನಿಷ್ಪ್ರಯೋಜಕ. ಈ ಬಗ್ಗೆ ನಮಗೆ ನಮ್ಮದೇ ಆದ ಅಭಿಪ್ರಾಯವಿದೆಯೆಂಬುದು ಬೇರೆ ವಿಷಯ. ಆದರೆ ಈ ಎರಡು ವಿಶಾಲ ಸಮಾಜವಾದೀ ಪ್ರಭುತ್ವಗಳು ಹಾಗೂ ಕಮ್ಯುನಿಸ್ಟ್ ಪಕ್ಷಗಳ ಸಂಬಂಧಗಳಲ್ಲಿ ಎರಡು ದಶಕಗಳಿಂದ ಇರುವ ಈ ಕಟುತ್ವದಿಂದಾಗಿ ಜಾಗತಿಕ ಸಮಾಜವಾದಕ್ಕೆ, ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಹಾಗೂ ಶಾಂತಿಗೆ, ಇವೆಲ್ಲಕ್ಕೂ ಮಿಗಿಲಾಗಿ ಸೋವಿಯೆತ್ ಸಂಘ ಹಾಗೂ ಚೀಣಾ ಈ ಎರಡು ದೊಡ್ಡ ಸಮಾಜವಾದೀ ಪ್ರಭುತ್ವಗಳಿಗೆ ಅಪಾರ ನಷ್ಟವಾಗಿದೆ, ಈಗಲೂ ಆಗುತ್ತಲಿದೆ ಎಂಬುದಂತೂ ನಮಗೆ ಸ್ಪಷ್ಟವಾಗಿದೆ.

ಈ ಬಗ್ಗೆ ಯೋಚಿಸುವಾಗ ಜಾಗತಿಕ ಸಮಾಜವಾದೀ ಬಣದಲ್ಲಿನ ಐಕ್ಯತೆ, ಜಾಗತಿಕ ಕಮ್ಯುನಿಸ್ಟ್ ಐಕ್ಯತೆ, ಎಲ್ಲಕ್ಕೂ ಮಿಗಿಲಾಗಿ ಸೋವಿಯೆತ್ ಸಂಘ ಹಾಗೂ ಜನತಾ ಚೀಣಾದ ನಡುವಣ ಐಕ್ಯತೆಯ ಹಿನ್ನೆಲೆಯಲ್ಲಿ ಜಾಗತಿಕ ಸಾಮ್ರಾಜ್ಯಶಾಹಿ ಕೋರಿಯಾ, ವಿಯೆಟ್ನಾಂ, ಕ್ಯೂಬಾ, ಅಲ್ಜೀರಿಯಾ ಹಾಗೂ ಇತರೆಡೆಗಳಲ್ಲಿ ಅವಮಾನಕರ ಸೋಲು ಅನುಭವಿಸಿದ ಆ ಮಹಾನ್ ದಿನಗಳ ನೆನಪಾಗುತ್ತದೆ. ಚೀಣಾ—ಸೋವಿಯೆತ್ ಸಂಘ ನಡುವಿನ ಭಿನ್ನಾಭಿಪ್ರಾಯ ಹಾಗೂ ಕಲಹದಿಂದ ಯಾರಿಗಾದರೂ ಲಾಭವಾಗಿದ್ದರೆ ಅದು ಸಾಮ್ರಾಜ್ಯಶಾಹಿಗೆ, ವಿಶೇಷವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗೆ. ಪಶ್ಚಿಮ ಏಷ್ಯಾ, ಆಗ್ನೇಯ ಏಷ್ಯಾ ಹಾಗೂ ಆಫ್ರಿಕಾದ ಈಗಿನ ವಿದ್ಯಮಾನಗಳಿಂದ ಇದು ಸ್ಪಷ್ಟವಾಗುತ್ತಿದೆ. ಸೀಮಿತ ನ್ಯೂಕ್ಲಿಯರ್ ಯುದ್ಧ ನಡೆಸುತ್ತೇನೆಂದು ಘೋಷಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಜಗತ್ತನ್ನು ನ್ಯೂಕ್ಲಿಯರ್ ದುರಂತದೆಡೆಗೆ ತಳ್ಳುತ್ತಿದೆ. ಜಾಗತಿಕ ಶಾಂತಿ ಹಾಗೂ ಸಮಾಜವಾದಗಳ ಹಿತಾಸಕ್ತಿ ಕಾಪಾಡಬೇಕಾದರೆ ತಕ್ಷಣ ಸಮಾಜವಾದೀ ಪ್ರಭುತ್ವಗಳ ನಡುವೆ, ವಿಶೇಷವಾಗಿ ಸೋವಿಯೆತ್ ಸಂಘ ಮತ್ತು ಜನತಾ ಚೀಣಾದ ನಡುವೆ ಮತ್ತೆ ಐಕ್ಯತೆ ಸ್ಥಾಪಿಸುವ ಪ್ರಯತ್ನಗಳು ನಡೆಯಬೇಕು.

ಇತ್ತೀಚೆಗೆ ನಡೆದ ಚೀಣಾ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೇ ಸಮ್ಮೇಳನದ ಕಲಾಪಗಳು, ಸೋವಿಯೆತ್ ಸಂಘದ ಹಾಗೂ ಚೀಣಾದ ಕಮ್ಯುನಿಸ್ಟ್ ಪಕ್ಷಗಳ ನಡುವಣ ದೂಷಣೆಯ ವಾಗ್ವಾದಗಳಲ್ಲಿ ಕಟುತನ ಕಮ್ಮಿಯಾಗುತ್ತಿರುವುದು ಹಾಗೂ ಇತ್ತೀಚಿನ ವಾರಗಳಲ್ಲಿ ಚೀಣಾ-ಸೋವಿಯೆತ್ ಸಂಘಗಳ ನಡುವೆ ಮಾತುಕತೆ ಆರಂಭವಾಗಿರುವುದು ಇವೆಲ್ಲಾ ಶಾಂತಿ, ಸ್ವಾತಂತ್ರ್ಯ ಹಾಗೂ ಸಮಾಜವಾದವನ್ನು ಬಯಸುವ ಜಗತ್ತಿನ ಜನರಲ್ಲಿ ಹೊಸ ಆಸೆಯನ್ನು ಉದ್ದೀಪಿಸಿವೆ. ಭಿನ್ನಾಭಿಪ್ರಾಯಗಳನ್ನು, ವಿವಾದಗಳನ್ನು ಬಗೆಹರಿಸಿಕೊಂಡು ಈ ಎರಡು ಪಕ್ಷಗಳ ಹಾಗೂ ಪ್ರಭುತ್ವಗಳ ನಡುವೆ ಸೌಹಾರ್ದಯುತ ಸಂಬಂಧಗಳನ್ನು ಮತ್ತೆ ಸ್ಥಾಪಿಸುವಲ್ಲಿ ಬಹಳಷ್ಟು ಅಡೆ-ತಡೆಗಳು ಹಾಗೂ ತೊಂದರೆಗಳು ಇವೆ ಎಂಬುದರ ಪೂರ್ಣ ಅರಿವು ನಮಗಿದ್ದಾಗ್ಯೂ ಈ ಪ್ರಯತ್ನಗಳನ್ನು ನಾವು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಈ ಅಡೆ ತಡೆಗಳು ಹಾಗೂ ತೊಂದರೆಗಳು ಜಡತೆ ಹಾಗೂ ನಿಸ್ಸಹಾಯಕತೆ ಪ್ರದರ್ಶಿಸುವ ಸಬೂಬುಗಳಾಗಬಾರದು. 'ಮನಸ್ಸಿದ್ದರೆ ಮಾರ್ಗ' ಎಂಬ ಬಹುಪ್ರಚಲಿತ ನಾಣ್ಣುಡಿಯಲ್ಲಿ ಮೇಲ್ನೋಟಕ್ಕೆ ಕಾಣುವುದಕ್ಕಿಂತಲೂ ಆಳವಾದ ಅರ್ಥ ಹುದುಗಿದೆ.

ಸದ್ಯ ಚೀಣಾ-ಸೋವಿಯೆತ್ ನಡುವೆ ಇರುವ ಬಿಗುವನ್ನು ಕಡಿಮೆಮಾಡುವಲ್ಲಿ ಸ್ವಲ್ಪವಾದರೂ ಯಶಸ್ಸು ದೊರೆತರೂ ಗಡಿವಿವಾದವೂ ಸೇರಿದಂತೆ ಎಲ್ಲಾ ವಿವಾದಗಳನ್ನು ಮುಂದೆ ಅಂತಿಮವಾಗಿ ಪರಿಹರಿಸುವಲ್ಲಿ ಇದು ಯಶಸ್ವೀ ಮೊದಲ ಹೆಜ್ಜೆಯಾಗುತ್ತದೆ ಎಂಬುದು ನಮ್ಮ ಅಭಿಪ್ರಾಯ.

ಚೀಣಾ-ಸೋವಿಯೆತ್ ಗಡಿಯ ಎರಡೂ ಕಡೆ ನಿಲ್ಲಿಸಿರುವ ಸೇನೆಯ ನಿಜವಾದಪರಿಮಾಣದಲೆಕ್ಕಾಚಾರವನ್ನು ಅತಿರಂಜಿತಗೊಳಿಸಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡರೂ ಹೀಗೆ ನಿಲ್ಲಿಸಿರುವ ಸೇನೆಯ ಸಂಖ್ಯೆ ಅಪಾರ ಎಂಬುದಂತೂ ಖಂಡಿತ. ಇಷ್ಟೊಂದು ದೊಡ್ಡ ಪ್ರಮಾಣದ ಮಿಲಿಟರಿ ತಯಾರಿಯಿಂದಾಗಿ ಎರಡೂ ದೇಶಗಳಿಗೆ ಅಪಾರ ವೆಚ್ಚವಾಗಿದೆ. ಈ ವೆಚ್ಚ ನಿಜವಾಗಿಯೂ ಯುದ್ಧದಲ್ಲಿ ತೊಡಗದೇನೇ ಯುದ್ಧದ ಬಗ್ಗೆ ಮಾಡುವ ವೆಚ್ಚವೆಂದೇ ಹೇಳಬೇಕು. ಇದು ಎರಡೂ ದೇಶಗಳ ಸಮಾಜವಾದೀ ಕೈಗಾರಿಕೀಕರಣ ಹಾಗೂ ಪುನರ್ರಚನೆಗೆ ದೊಡ್ಡ ಅಡ್ಡಿ. ಎರಡೂ ಸಮಾಜವಾದೀ ಪ್ರಭುತ್ವಗಳ ತ್ವರಿತಗತಿಯ ಆರ್ಥಿಕ ಬೆಳವಣಿಗೆಗೆ ಇದು ಆತಂಕವೊಡ್ಡುತ್ತದೆ ಎಂದು ಹೇಳುವುದಾದರೆ ಅದು ಜನತಾ ಚೀಣಾಕ್ಕೆ ಇನ್ನೂ ಹೆಚ್ಚಾಗಿ ಅನ್ವಯವಾಗುತ್ತಿದೆ. ಯಾಕೆಂದರೆ ಅದು ಸುಮಾರು ನೂರು ಕೋಟಿಯನ್ನು ಮೀರಿದ ಭಾರೀ ಜನಸಂಖ್ಯೆ ಪಡೆದ ಇನ್ನೂ ಬಹಳಷ್ಟು ಅಭಿವೃದ್ಧಿ ಹೊಂದಬೇಕಾಗಿರುವ ದೇಶ. ಆದ್ದರಿಂದ ಸಂಬಂಧಗಳನ್ನು ಸುಧಾರಿಸುವ ದಿಕ್ಕಿನಲ್ಲಿ ಇಟ್ಟ ಒಂದು ಹೆಜ್ಜೆ, ಅದು ಎಷ್ಟೇ ಸಣ್ಣದಾಗಿರಲಿ ಪ್ರಮುಖ ವಿವಾದಗಳನ್ನು ಬಗೆಹರಿಸುವ ದೀರ್ಘ ಕಾಲದ ಹೋರಾಟದಲ್ಲಿ ಯಶಸ್ವೀ ಪ್ರಥಮ ಹೆಜ್ಜೆಯಾಗಬಹುದು; ಇದರಿಂದಾಗಿ ಕೊನೆಗೆ ಸೋವಿಯೆತ್ ಸಂಘ ಹಾಗೂ ಸಮಾಜವಾದೀ ಚೀಣಾದ ನಡುವೆ ಮತ್ತೆ ಸೌಹಾರ್ದಯುತ ಸಂಬಂಧಗಳು ನೆಲೆಗೊಳ್ಳಲು ಅವಕಾಶವಾಗಬಹುದು.

ಚೀಣಾ - ಸೋವಿಯೆತ್ ಭಿನ್ನಾಭಿಪ್ರಾಯಗಳನ್ನು, ಅಂತರಗಳನ್ನು ಅಂತಿಮವಾಗಿ ಹಾಗೂ ಯಶಸ್ವಿಯಾಗಿ ಬಗೆಹರಿಸಿಕೊಳ್ಳುವಲ್ಲಿ ಸದ್ಯದ ಮಾತುಕತೆಗಳು ಒಂದು ಉತ್ತಮ ಆರಂಭವಾಗುವಂತೆ ಸೋವಿಯೆತ್ ಸಂಘ ಹಾಗೂ ಚೀಣಾ ತಮ್ಮ ಕೈಲಾದ ಎಲ್ಲಾ ಪ್ರಯತ್ನ ನಡೆಸುತ್ತಾರೆಂಬುದು ನಮ್ಮ ಕಳಕಳಿಯ ಆಶಯ. ಜಾಗತಿಕ ಶಾಂತಿಯನ್ನು ರಕ್ಷಿಸಿ, ಯುದ್ಧೋನ್ಮಾದೀ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಸೋಲಿಸಲು ಸಾಧ್ಯವಿರುವುದು ಅಂತಿಮವಾಗಿ ಸಮಾಜವಾದೀ ದೇಶಗಳು, ಪ್ರಜಾಪ್ರಭುತ್ವವಾದೀ ಹಾಗೂ ಸ್ವಾತಂತ್ರ್ಯ ಪ್ರೇಮೀ ಶಕ್ತಿಗಳು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ವರ್ಗ ಚಳುವಳಿಯ ಐಕ್ಯತೆಯಿಂದ ಮಾತ್ರ. ಆದ್ದರಿಂದ ಜಗತ್ತಿನ ಎಲ್ಲಾ ಪ್ರಗತಿಶೀಲರು ಹಾಗೂ ಶಾಂತಿ ಪ್ರಿಯರು ಸೋವಿಯೆತ್ ಸಂಘ ಹಾಗೂ ಚೀಣಾ ನಡುವೇ ಮಾತುಕತೆಗಳ ಕಡೆಗೆ ಬಹಳಷ್ಟು ಆಸೆ, ನಿರೀಕ್ಷೆಗಳಿಂದ ತುಂಬಿದ ಕಣ್ಣುಗಳಿಂದ ನೋಡುತ್ತಿದ್ದಾರೆ.

○

ಸಾದರ ಸ್ವೀಕಾರ

ಹೊಸ ಜಗತ್ತಿನ ತತ್ವ

(ದ್ವಂದ್ವಮಾನ ಭೌತಿಕವಾದ)

ಮೂಲ : ಓವ್‌ಷಿ ಯಖೋತ್ ; ಅನು : ಸಿ. ಆರ್. ಕೃಷ್ಣರಾವ್

ಬೆಲೆ : 3-50 ರೂ. ಪುಟ : 95

ಪ್ರಕಾಶನ : ನವ ಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

[17-10-82ರ ಐಕ್ಯರಂಗ (7ನೇ ಪುಟ)ದಲ್ಲಿ ಹತ್ತು ಪುಸ್ತಕಗಳ ಪ್ರಕಾಶಕರು ನವ ಕರ್ನಾಟಕ ಸಂಸ್ಥೆಯವರು ಎಂದು ಪ್ರಕಟವಾಗಿತ್ತು. ಎಸ್. ಇ. ಬಲರಾಮರ "ಮಾರ್ಕ್ಸ್‌ವಾದ ಎಂದರೇನು", ? ಎಸ್. ಜಿ. ಸರ್ದೇಸಾಯಿ ಅವರ, "ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ರಾಷ್ಟ್ರೀಯ ಏಕತೆ", ಪಿ. ಟಿ. ಭಾಸ್ಕರ್ ಫಣಿಕರ್‌ರವರ "ಎಳೆಯರಿಗಾಗಿ ಮಾರ್ಕ್ಸ್‌ವಾದ" —ಈ ಮೂರು ಪುಸ್ತಕಗಳ ಪ್ರಕಾಶಕರು ನವ ಕರ್ನಾಟಕ ಸಂಸ್ಥೆಯವರು. ಉಳಿದ 7 ಪುಸ್ತಕಗಳ ಪ್ರಕಾಶಕರು ಮಾಸ್ಕೋದ ಪ್ರಗತಿ ಪ್ರಕಾಶನದವರು. ಅಧಿಕೃತ ಮಾರಾಟಗಾರರು ನವಕರ್ನಾಟಕ ಸಂಸ್ಥೆಯವರು.

ದಯವಿಟ್ಟು ಗಮನಿಸಬೇಕಾಗಿ ಕೋರಿಕೆ.]

ಐ. ಎಂ. ಎಫ್ ಒಪ್ಪಂದದ ಪರಿಣಾಮ

(3ನೇ ಪುಟದಿಂದ)

(ತಿದ್ದುಪಡಿ) ಮಸೂದೆಯನ್ನು ಸರಕಾರವು ಕೇಂದ್ರ ಕಾರ್ಮಿಕ ಸಂಘಟನೆಗಳೊಡನೆ ಯಾವುದೇ ಸಮಾಲೋಚನೆ ನಡೆಸದೆ, ಏಕಪಕ್ಷೀಯವಾಗಿ ಜ್ಯಾರಿ ಮಾಡಿಸಿಕೊಂಡ ಬಳಿಕವಂತೂ, ಇಂತಹ ಸಮ್ಮೇಳನದಲ್ಲಿ ಭಾಗವಹಿಸುವುದರಲ್ಲಿ ಯಾವ ಅರ್ಥವೂ ಇರಲಿಲ್ಲ. ಹೀಗೆ ದೇಶದ ಕಾರ್ಮಿಕರು ಮತ್ತು ನೌಕರರೊಂದಿಗೆ ಸರಕಾರವೇ ಕಾಲುಕೆದರಿ ಜಗಳಕ್ಕೆ ಬರುತ್ತಿದೆ.

ಈ ಉದ್ದೇಶಗಳಿಗಾಗಿಯೇ ಸಿ. ಪಿ. ಐ. (ಎಂ) ಮತ್ತು ಸಿ. ಪಿ. ಐ. ಗಳಿಗೆ ಸೇರಿರುವ ಕಿಸಾನ್ ಸಭೆಗಳು ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಸುವ ರೈತರ ಜಂಟೀ ಸಮಾವೇಶವೊಂದನ್ನು ಏರ್ಪಡಿಸಲು ಕಳೆದ ತಿಂಗಳು ನಿರ್ಧರಿಸಿವೆ. ಈ ಹೋರಾಟ ಮತ್ತು ಇದೇ ರೀತಿಯ ಅನೇಕ ಚಳುವಳಿಗಳು ನಿರ್ದಿಷ್ಟ ವರ್ಗ, ಜನ ವಿಭಾಗ ಮತ್ತು ವಿವಿಧ ಹಂತದ ಹೋರಾಟಗಳನ್ನು ನಿಸ್ಸಂದೇಹವಾಗಿ ಬಲಪಡಿಸಲಿದೆ.

(ಮುಂದುವರಿಯುವುದು)

ನಿಮ್ಮ ಚಂದಾ ಅವಧಿ ಮುಗಿದಿದೆಯೇ ?
ದಯವಿಟ್ಟು ನವೀಕರಿಸಿ.

ಐಕ್ಯರಂಗದ ಚಂದಾ ಅವಧಿ ಮುಗಿದಿರುವ ಚಂದಾದಾರರಿಗೆ ಚಂದಾ ನವೀಕರಿಸುವಂತೆ ವಿನಂತಿಸಿ ಆಗ್ಗಾಗ್ಗೆ ಮುನ್ಸೂಚನೆ ನೀಡುತ್ತಲಿದ್ದೇವೆ. ನಿಮ್ಮ ಚಂದಾ ಅವಧಿ ಮುಗಿದಿದ್ದರೆ ದಯವಿಟ್ಟು ನವೀಕರಿಸಿ. ಚಂದಾ ಅವಧಿ ಮುಗಿದವರಿಗೆ ಪತ್ರಿಕೆಯನ್ನು ಕಳುಹಿಸುವುದನ್ನು ನಿಲ್ಲಿಸಲಾಗುವುದು.

ಐಕ್ಯರಂಗದ ವಾರ್ಷಿಕ ಚಂದಾ ರೂ. 30, ಅರ್ಧ ವಾರ್ಷಿಕ ರೂ. 15. ಅರ್ಧ ವರ್ಷಕ್ಕಿಂತ ಕಡಿಮೆ ಅವಧಿಗೆ ಚಂದಾ ಹಣ ಸ್ವೀಕಸಲಾಗುವುದಿಲ್ಲ.

ಏಜನ್ಸಿದಾರರು ಬಿಲ್ ತಲುಪಿದ 15 ದಿನಗಳ ಒಳಗೆ ಹಣ ಕಳಿಸುವಂತೆ ಅನೇಕ ಸಲ ವಿನಂತಿಸಿಕೊಂಡಿದ್ದೇವೆ. ಸಕಾಲಕ್ಕೆ ಹಣ ತಲುಪದಿದ್ದಲ್ಲಿ ಮುನ್ಸೂಚನೆ ನೀಡದೆ ಪತ್ರಿಕೆ ಕಳಿಸುವುದನ್ನು ನಿಲ್ಲಿಸಲಾಗುವುದು.

ಇನ್ನು, ಐಕ್ಯರಂಗಕ್ಕೆ ಸುದ್ದಿ, ವರದಿ, ಲೇಖನ ಕಳಿಸುವುದಿದ್ದಲ್ಲಿ ಸಂಪಾದಕರು ಐಕ್ಯರಂಗ ಎಂಬ ವಿಳಾಸಕ್ಕೆ ಕಳಿಸಬೇಕು. ರಾಜ್ಯ ಕಾರ್ಯದರ್ಶಿಯವರ ವಿಳಾಸಕ್ಕೆ ಕಳಿಸುವುದು ಬೇಡ. ಸರಿಯಾದ ವಿಳಾಸಕ್ಕೆ ಕಳಿಸದಿದ್ದಲ್ಲಿ ಆಗುವ ವಿಳಂಬಕ್ಕೆ ನಾವು ಹೊಣೆಗಾರರಲ್ಲ.

ಅನೇಕ ತೊಂದರೆಗಳಿದ್ದಾಗ್ಯೂ ಪತ್ರಿಕೆಯನ್ನು ಚೆನ್ನಾಗಿ, ಸೂಕ್ತ ಸಮಯದಲ್ಲಿ ಹೊರತರಲು ಶ್ರಮಿಸುತ್ತಿದ್ದೇವೆ. ನಿಮ್ಮ ಸಹಕಾರ, ಬೆಂಬಲ ಅತ್ಯಗತ್ಯ.

ನಿಮ್ಮದೇ ಆದ ಐಕ್ಯರಂಗವನ್ನು ಉಳಿಸಿಕೊಂಡು, ಮುಂದುವರೆಸಿಕೊಂಡು ಹೋಗಲು ದಯವಿಟ್ಟು ಸಹಕರಿಸಿ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಲು ನೆರವು ನೀಡಿ ಹೊಸ ಚಂದಾದಾರರನ್ನಾಗಿ ಮಾಡಿಸಿ ಕೊಡಿ.

ವ್ಯವಸ್ಥಾಪಕರು
ಐಕ್ಯರಂಗ

ಮೂಲಭೂತ ಆಂತರಿಕ ಬದಲಾವಣೆ ಅಗತ್ಯ — ಇದಕ್ಕೆ ಸೋವಿಯತ್ ನೆರವು ಬದಲಿಯಾಗಲಾರದು

—ಎಂ. ಬಸವಪುನ್ನಯ್ಯ

ವಿಶ್ವಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಪ್ರಗತಿಯ ಹಾದಿಯಲ್ಲಿ ಭಾರತ-ಸೋವಿಯತ್ ಮೈತ್ರಿ ಮತ್ತು ಸಹಕಾರ ಪ್ರಮುಖ ಮೈಲಿಗಲ್ಲಾಗಿದೆ. ಕಮ್ಯೂನಿಸ್ಟ್ ವಿರೋಧಿಗಳು ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿಯ ಬಾಲಬಡುಕರು ಏನೇ ಹೇಳಿದರೂ ಈ ಮೈತ್ರಿಯ ಪ್ರಾಮುಖ್ಯತೆ ಕಡಿಮೆಯಾಗುವುದಿಲ್ಲ. ಭಾರತ ಮತ್ತು ಸೋವಿಯತ್ ಯೂನಿಯನ್ ಇವೆರಡೂ ವಿಭಿನ್ನ ಸಮಾಜ ವ್ಯವಸ್ಥೆ ಹೊಂದಿದೆ ಎನ್ನುವುದಾಗಲೀ, ಭಾರತವು ತನ್ನ ಔದ್ಯೋಗಿಕ-ಮಿಲಿಟರಿ ಶಕ್ತಿಯ ಮಿತಿಯಿಂದಾಗಿ ವಿಶ್ವದ ದೊಡ್ಡ ಜವಾಬ್ದಾರಿ ಹೊರಲಾರದು ಎನ್ನುವುದಾಗಲೀ ಇದೆಲ್ಲ ವಾಸ್ತವತೆಯಿಂದ ದೂರ ಓಡುವ ಪ್ರಯತ್ನವಾಗುತ್ತದೆ.

ಸಹಕಾರದ ಮಹತ್ವ :

ಈ ಹಿನ್ನೆಲೆಯಲ್ಲಿ ಭಾರತದ ಅಲಿಪ್ತ ನೀತಿ, ಶಾಂತಿಪ್ರಿಯತೆ ಮತ್ತು ವಸಾಹತುಶಾಹಿ ವಿರೋಧವನ್ನು ಸಮಾಜವಾದಿ ರಾಷ್ಟ್ರಗಳು ಪ್ರಶಂಸಿವೆ. ಭಾರತ-ಸೋವಿಯತ್ ಮೈತ್ರಿಯ ಅರ್ಥ ಮತ್ತು ಮಹತ್ವವನ್ನು ಈ ಹಿನ್ನೆಲೆಯಲ್ಲಿ ಮಾತ್ರ ವಸ್ತುನಿಷ್ಟವಾಗಿ ಮತ್ತು ನೈಜವಾಗಿ ಪರಿಶೀಲಿಸಬಹುದು.

ಸಾಮ್ರಾಜ್ಯಶಾಹಿ ಅಮೇರಿಕ ಮತ್ತು ಸಮಾಜವಾದಿ ಸೋವಿಯತ್ ಯೂನಿಯನ್ ನಡುವೆ ಸಮ-ದೂರದ ನೀತಿ ಅನುಸರಿಸಬೇಕೆಂದು ಹೇಳುತ್ತಲೇ ಬಂದಿರುವ ನಮ್ಮ ಅತಿ ಬುದ್ಧಿವಂತ ಬೂರ್ಜ್ವಾ ಸಿದ್ಧಾಂತಿಗಳು ಅರ್ಥಮಾಡಿಕೊಳ್ಳಬೇಕು—ಈ ಸಮದೂರದ ನೀತಿ ನಮ್ಮ ಅಲಿಪ್ತ, ಶಾಂತಿಯ ನೀತಿಗೆ ಹೊಂದಿಕೆಯಾಗುವುದಿಲ್ಲ. ಅಮೇರಿಕವು ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತಾ ಪರಿಮಿತ ನ್ಯೂಕ್ಲಿಯರ್ ಯುದ್ಧದ ಬಗ್ಗೆ ಮಾತಾಡುತ್ತ ಅನೇಕ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಧಕ್ಕೆಯೊಡ್ಡುತ್ತಿದೆ. ಇಂಥ ಸಮಯದಲ್ಲಿ ಸಮ-ದೂರದ ನೀತಿ ಅನುಸರಿಸುವುದು ಅಪಾಯಕಾರಿಯಾಗಿದೆ. ಅಂಥ ನೀತಿಯನ್ನೇನಾದರೂ ನಮ್ಮ ಆಳುವ ಶಕ್ತಿಗಳು ಪಾಲಿಸಿದಲ್ಲಿ ಭಾರತ-ಸೋವಿಯತ್ ಮೈತ್ರಿಗೆ ಮಾತ್ರವಲ್ಲದೆ, ನಮ್ಮ ಪ್ರಿಯವಾದ ಸ್ವಾತಂತ್ರ್ಯಕ್ಕೇ ಏಟು ಬೀಳುವ ಸಾಧ್ಯತೆಯೂ ಇದೆ. ಆದರೆ ಈ ಸಮದೂರ ಪ್ರತಿಪಾದಕರ ಮಾತುಗಳನ್ನು ಸರ್ಕಾರ ಗಮನಕ್ಕೆ ತಾರದೆ ಇರುವುದು ಸಂತಸದ ಸಂಗತಿ.

ಎರಡು ಮುಖ್ಯ ಪ್ರಶ್ನೆಗಳು:

ನಮ್ಮ ಪ್ರಸ್ತುತ ಚರ್ಚೆಯಲ್ಲಿ ಎರಡು ಮುಖ್ಯ ಪ್ರಶ್ನೆಗಳು ಏಳುತ್ತವೆ. ಒಂದು, ಕಳೆದ ಮೂರು ದಶಕಗಳಿಂದ ಇರುವ ಸೋವಿಯತ್ ಸಹಾಯವನ್ನು ನಾವು ಸ್ವಾವಲಂಬನೆಯತ್ತ ಮತ್ತು ಆರ್ಥಿಕ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುವತ್ತ ಬಳಸಿಕೊಂಡಿದ್ದೇವೆಯೇ ಅನ್ನುವುದು ಎರಡನೆಯದು, ಸಾಮ್ರಾಜ್ಯಶಾಹಿಯ ಆಕ್ರಮಣತೆ ಹೆಚ್ಚುತ್ತಿರುವಾಗ, ವಿದೇಶೀ ಬಂಡವಾಳದೊಂದಿಗೆ ಸಖ್ಯತೆ ಮತ್ತು ದೊಡ್ಡ ಉದ್ಯಮ, ಭೂಮಾಲೀಕರ ರಕ್ಷಣೆಯ ನೀತಿಯನ್ನು ಅನುಸರಿಸುವುದರಿಂದ ಭಾರತದ ಅಲಿಪ್ತ ಹಾಗೂ ವಸಾಹತು ವಿರೋಧಿ ಧೋರಣೆ ಬಲಗೊಳ್ಳುವುದೇ ಮತ್ತು ಪರಿಸ್ಥಿತಿಯ ಒತ್ತಡಗಳನ್ನು ತಡೆಯಬಲ್ಲುದೆ ಎನ್ನುವುದು.

ಈ ಎರಡು ವಿಷಯಗಳಲ್ಲಿನ ಅಪಾಯದ ಕುರಿತು ಸರ್ಕಾರದ ವಕ್ತಾರರು ತೀರಾ ನಿರ್ಲಿಪ್ತರಾಗಿದ್ದಾರೆ. ಸೋವಿಯತ್ ನೆರವನ್ನು ಬಳಸುವಲ್ಲಿ ತಾವು ಜಾಣರಾಗಿದ್ದೇವೆಂದೂ ಮತ್ತು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ಮೇಲಿನ ಅವಲಂಬನೆ ಹೆಚ್ಚುತ್ತಿದ್ದರೂ ಭಾರತ ಅಲಿಪ್ತ, ಶಾಂತಿಪ್ರಿಯ ನೀತಿ ಮುಂದುವರಿಸಬಹುದೆಂದು ಇವರು ಜಂಭ ಕೊಚ್ಚಿಕೊಳ್ಳುತ್ತಾರೆ.

ಸೋವಿಯತ್ ಯೂನಿಯನ್ನಿನ ಪಾತ್ರ :

ಭಾರತ – ಸೋವಿಯತ್ ಮೈತ್ರಿ ಮತ್ತು ಸಹಕಾರ 1955ನೇ ಇಸವಿಯ ಹೊತ್ತಿಗೆ ಆರಂಭವಾಗಿರುವುದು ಕಾಣುತ್ತೇವೆ. ಆಗ ಭಿಲಾಯಿ ಉಕ್ಕಿನ ಕಾರ್ಖಾನೆ ಒಪ್ಪಂದವಾಯಿತು. ಅದಾದ ಮೇಲೆ ಬೇರೆ ಬಂಡವಾಳಶಾಹಿ ರಾಷ್ಟ್ರಗಳು ನೆರವಿಗೆ ಮುಂದೆ ಬಂದವು. ಇದಾಗಿ ಈಗಾಗಲೇ 27 ವರ್ಷಗಳು ಸಂದಿವೆ. ಈ ವರ್ಷಗಳಲ್ಲಿ 80 ರಷ್ಟು ಸಣ್ಣ ಮತ್ತು ದೊಡ್ಡ ಕೈಗಾರಿಕಾ ಘಟಕಗಳು ಸೋವಿಯತ್ ನೆರವಿನಿಂದ ಕಟ್ಟಲ್ಪಟ್ಟಿವೆ. ಉಕ್ಕು, ತೈಲ, ಅಲ್ಯೂಮಿನಿಯಮ್, ಕಲ್ಲಿದ್ದಲು, ಭಾರಿ ಯಂತ್ರೋಪಕರಣಗಳು ಇತ್ಯಾದಿ ಕ್ಷೇತ್ರಗಳಲ್ಲಿ ಸೋವಿಯತ್ ಸಹಾಯ ದೊರಕಿದೆ.

ಭಾರತದ ಸ್ವಾವಲಂಬನೆಯ ಕಾರ್ಯದಲ್ಲಿ ಸೋವಿಯತ್ ಯೂನಿಯನ್ನಿನ ಮಹತ್ತರ ಪಾತ್ರವನ್ನು ಭಾರತ ಪ್ರಶಂಸಿಸುವುದಾಗಿ ಇತ್ತೀಚಿನ ಘೋಷಣೆಯಲ್ಲಿ ಹೇಳಲಾಗಿದೆ.

"ಅಮೇರಿಕದ ಪ್ರವಾಸಕ್ಕೆ ಹೋಲಿಸಿದಾಗ ಇಂಧಿರಾಗಾಂಧಿಯವರ ಸೋವಿಯತ್ ಭೇಟಿಯಿಂದ ಆರ್ಥಿಕ ಸಹಕಾರದ ಕ್ಷೇತ್ರದಲ್ಲಿ ಅಸಾಮಾನ್ಯ ಪರಿಣಾಮಗಳು ಆಗಿವೆ" ಎಂದು ಯು. ಎನ್. ಐ. ವರದಿ ಹೇಳುತ್ತದೆ.

"ವಿವಿಧ ಉದ್ಯಮಗಳ ಬೆಳವಣಿಗೆಗೆ ಸೋವಿಯತ್ ಯೂನಿಯನ್ ತನ್ನ ನೆರವು ನೀಡಲು ಮುಂದೆ ಬಂದಿದೆ. ನ್ಯೂಕ್ಲಿಯರ್ ಶಕ್ತಿ, ಘಟಕ ಒರಿಸ್ಸಾದಲ್ಲಿ ಉಕ್ಕಿನ ಹಾಗೂ ಆಂಧ್ರದಲ್ಲಿ ಅಲ್ಯೂಮಿನಿಯಂ ಘಟಕ, ಭಿಲಾಯಿ, ಬೊಕಾರೊಗಳಲ್ಲಿ ಉತ್ಪಾದನೆ ಹೆಚ್ಚಳದ ಸಾಧನೆ, ತೈಲ ಅನ್ವೇಷಣೆ ಇತ್ಯಾದಿ."

ಸೋವಿಯತ್ ನೆರವಿನ ದೊಡ್ಡ ಪಟ್ಟಿ ಇನ್ನೂ ಇದ್ದು ಅವುಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ರಕ್ಷಣಾ ಅಗತ್ಯತೆಗಳು :

ಇಷ್ಟು ಆರ್ಥಿಕ ಕ್ಷೇತ್ರದ ನೆರವು ಮಾತ್ರವಲ್ಲ. ರಾಷ್ಟ್ರರಕ್ಷಣೆಯ ಉದ್ದೇಶದಲ್ಲಿ ಸೋವಿಯತ್ ನೆರವು ಅತ್ಯಮೂಲ್ಯವಾದುದು. ವಿದೇಶೀ ನೆರವಿನ ಹೆಚ್ಚಿನ ಪಾಲು ರಕ್ಷಣೆಯ ವೆಚ್ಚಕ್ಕೇ ಹೋಗುವಂತೆ ಸಾಮ್ರಾಜ್ಯಶಾಹಿಗಳು ಅದರಲ್ಲೂ ಅಮೇರಿಕಾ ನೋಡಿಕೊಂಡಿದೆ. ಕಾಶ್ಮೀರ ಪ್ರಶ್ನೆಯನ್ನು ಬಳಸಿಕೊಂಡು ಮಿಲಿಟರಿ ಒಪ್ಪಂದಗಳು, ಪಾಕಿಸ್ತಾನ ಮತ್ತು ಅಮೇರಿಕದ ನಡುವೆ ಉಂಟಾದವು. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಬಗ್ಗೆ ಸೋವಿಯತ್‌ನ ವಿಟೊ ಚಲಾವಣೆಯಿಂದ ಅಮೇರಿಕದ ಕುತಂತ್ರ ನಡೆಯಲಿಲ್ಲ. ಹಿಂದೂ ಸಾಗರದಲ್ಲಿ ಅಮೆರಿಕದ ಅರನೆ ನೌಕಾಪಡೆ ಬಂದಿದ್ದು ಎಲ್ಲರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಭಾರತದ ನಿಜವಾದ ಮಿತ್ರನಾದದ್ದು ಸೋವಿಯತ್ ಯೂನಿಯನ್.

"ರಕ್ಷಣಾ ಸಾಮಗ್ರಿಗಳು ಮಾತ್ರವಲ್ಲದೆ ವ್ಯಾಪಾರೀ ಕ್ಷೇತ್ರದಲ್ಲೂ ಸೋವಿಯತ್ ಯೂನಿಯನ್ ಮುಖ್ಯ ಪಾಲುದಾರನಾಗಿದೆ" ಎಂದು ಬೂರ್ಜ್ವಾ ಲೇಖಕರೊಬ್ಬರು ಹೇಳುತ್ತಾರೆ. ಅವರೇ ಹೇಳುವಂತೆ — "ಸೋವಿಯತ್ ಪಶ್ಚಿಮದ ರಾಷ್ಟ್ರಗಳೊಂದಿಗೆ ಸ್ಪರ್ಧಿಸಬಲ್ಲುದು. ಸೋವಿಯತ್‌ನ ಸಾಲದ ದರ ಅತೀ ಕಡಿಮೆ ಶೇಕಡ 2 5 ಮರುಪಾವತಿಗೆ 15 ವರ್ಷ ಅವಧಿಯಿದೆ ಮತ್ತು ಉಪಕರಣಗಳು ಉತ್ತಮ ದರ್ಜೆಯವು."

ಹೀಗಿದ್ದಾಗ್ಯೂ ಅವರು, ಅಮೆರಿಕ ಮತ್ತು ಸೋವಿಯತ್ ನಡುವೆ ಸಮ-ದೂರದ ನೀತಿ ಬೇಕೆನ್ನುತ್ತಾರೆ. ಇವರ ವಿಶೇಷ ಬುದ್ಧಿವಂತಿಕೆ ಮತ್ತು ಕಮ್ಯೂನಿಸಮ್ ವಿರೋಧದಲ್ಲಿ ಇವರನ್ನು ಯಾರೂ ಮೀರಿಸಲಾರರು !

ರಾಜಕೀಯ ಸ್ವಾತಂತ್ರ್ಯ ದೊರೆತು 35 ವರ್ಷಗಳ ನಂತರವೂ ರಕ್ಷಣೆಯ ವಿಷಯದಲ್ಲಿ ಬೇರೆ ರಾಷ್ಟ್ರಗಳ ಮೇಲೆ ಅವಲಂಬಿಸಿರುವುದರ ಬಗ್ಗೆ ಸಿ. ಪಿ. ಐ. (ಎಂ.) ಗಮನಿಸಿದೆ.

ಅಪಾರ ಸೋವಿಯತ್ ನೆರವು ಮತ್ತು ಈ ನೆರವನ್ನು ಚೌಕಾಶಿ ಶಕ್ತಿಯಾಗಿ ಬಳಸಿ, ಪಾಶ್ಚಿಮಾತ್ಯ ದೇಶಗಳಿಂದ ನೆರವು ಇವೆಲ್ಲ ಭಾರತವನ್ನು ಔದ್ಯೋಗೀಕರಣ ಮತ್ತು ಸ್ವಾವಲಂಬನೆಯತ್ತ ಕೊಂಡೊಯ್ಯುತ್ತಿಲ್ಲ. ಸೆಪ್ಟಂಬರ್ 26 ರ ಸ್ಟೇಟ್‌ಮನ್ ಪತ್ರಿಕೆಯಲ್ಲಿನ ವರದಿ ಪ್ರಕಾರ — "ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆಯ ಮುಖ್ಯ ಡೈರೆಕ್ಟರ್ ಆಗಿದ್ದ ಡಾ|| ನಾಯುಡಮ್ಮ ಹೇಳುತ್ತಾರೆ — ಕೆಲವು ಮುಂದುವರಿದ ದೇಶಗಳ ಆದಾಯ ಮಟ್ಟವನ್ನು ತಲುಪಬೇಕಾದರೆ 357 ವರ್ಷಗಳು ತಗಲುತ್ತವೆ."

ಮೂಲಭೂತ ಬದಲಾವಣೆ ಆಗಬೇಕು

ನಮ್ಮ ಮಟ್ಟಿಗೆ ಹೇಳುವುದಾದರೆ ಸೋವಿಯತ್ ನೆರವಿನಲ್ಲಿರುವ ಒಳ್ಳೆಯ ಅಂಶಗಳನ್ನು ನಾವು ಮೆಚ್ಚುತ್ತೇವೆ. ಆದರೆ ಮೂಲಭೂತವಾಗಿ ಭಾರತದಲ್ಲಿ ಸಾಮಾಜಿಕ ಪರಿವರ್ತನೆ ಆಗದೆ ಹೋದಲ್ಲಿ ಈ ಸೋವಿಯತ್ ನೆರವು ಯಾವ ಜಾದೂವಾಗಿಯೂ ಪರಿಣಮಿಸುವುದಿಲ್ಲ. ಈಗಿನದಕ್ಕಿಂತ ಹತ್ತು ಪಟ್ಟು ಹೆಚ್ಚು ನೆರವುಪಡಕೊಂಡರೂ ಸಹ ಹಳೆಯ ಹಾಗೂ ಅಗಾಧವಾದ ಹಿಂದುಳಿಕೆಯನ್ನು ಮೇಲೆತ್ತಲಾಗಲಾರದು.

ಈ ಸಂದರ್ಭದಲ್ಲಿ, ಐಕ್ಯ ಸಿ.ಐ.ಐ.ನ ರಾಷ್ಟ್ರೀಯ ಕೌನ್ಸಿಲ್‌ನಲ್ಲಿಡಾಂಗೆಹೇಳಿದ ವಿಚಿತ್ರ ಮಾತುಗಳುನೆನಪಿಗೆ ಬರುತ್ತವೆ. ರಷ್ಯನ್ ರೂಬಲ್ ಅಮೆರಿಕದ ಡಾಲರ್‌ಗೆ ಪ್ರತ್ಯೌಷಧ ಎಂದೂ, ವಿದೇಶೀ ಬಂಡವಾಳದ ಹೂಡಿಕೆಯಿಂದ ಗಾಬರಿ ಪಡಬೇಕಾದ್ದಿಲ್ಲವೆಂದೂ ಯಾಕೆಂದರೆ ಈ ಹೂಡಿಕೆ ಜಾನ್‌ಸನ್‌ಪೌಡರ್ ಇತ್ಯಾದಿ ಯಂಥವುಗಳಲ್ಲಿ ಇರುತ್ತದೆ ಎಂದಿದ್ದರು ಇಂಥ ಧೋರಣೆಯ ಫಲವಾಗಿ, ಆರ್ಥಿಕವಾಗಿ ಸರ್ಕಾರಿ ಕ್ಷೇತ್ರದ ಹಿರಿಮೆಯನ್ನು ಎತ್ತಿ ಹಿಡಿದದ್ದು ಮಾತ್ರವಲ್ಲದೆ ಭಾರತೀಯ ಪ್ರಭುತ್ವ ಮತ್ತು ಕಾರ್ಮಿಕ ವರ್ಗದ ಸಖ್ಯತೆಯನ್ನು ಸೂಚಿಸಿದ್ದರು.

27 ವರ್ಷಗಳ ಸೋವಿಯತ್ ನೆರವು ಅನೇಕ ಕ್ಷೇತ್ರಗಳಲ್ಲಿ ಸಹಾಯವುಂಟಾಗಿದ್ದರೂ ಭಾರತದ ಬಡತನ, ಅನಕ್ಷರತೆಯನ್ನು ಹೋಗಲಾಡಿಸಲಾಗಿಲ್ಲ. ಭಾರತದ ಪ್ರಭುತ್ವ ಮತ್ತು ಸರ್ಕಾರದ ವರ್ಗ ಗುಣದಿಂದಾಗಿರುವ ಮಿತಿಗಳಿಂದಾಗಿ ಲಕ್ಷಗಟ್ಟಲೆ ಜನರ ಬಡತನ ಹೋಗಲಾಡಿಸಲು ಈ ನೆರವು ಬಳಸುವುದು ಸಾಧ್ಯವಾಗುವುದಿಲ್ಲ

ನಮ್ಮ ಆರ್ಥಿಕ ಸ್ಥಿತಿ :

ಕಳೆದ ಮೂರುವರೆ ದಶಕಗಳಲ್ಲಿ ಸಮಾಜವಾದಿ ಮತ್ತು ಬಂಡವಾಳಶಾಹಿ ರಾಷ್ಟ್ರಗಳಿಂದ ರೂ. 30,000 ಕೋಟಿಗಿಂತ ಹೆಚ್ಚು ವಿದೇಶೀ ನೆರವು ಪಡೆದಿದೆ ಇದು ಒಟ್ಟು ಯೋಜನಾ ವೆಚ್ಚದ ಶೇಕಡಾ 12ರಷ್ಟೆಂದು ಇಂದಿರಾ ಗಾಂಧಿಯವರು ಹೇಳುತ್ತಾರೆ. ಅಂದರೆ ಈ ಬೂರ್ಜ್ವಾ-ಭೂಮಾಲೀಕ ಸರ್ಕಾರ ಒಟ್ಟಿನಲ್ಲಿ 250,000 ಕೋಟಿ ರೂಗಳನ್ನು ಕಳೆದ 6 ಪಂಚವಾರ್ಷಿಕ ಯೋಜನೆಗಳಲ್ಲಿ ಖರ್ಚುಮಾಡಿದೆ. ಆದರೆ ಭಾರತದ ಹೆಗ್ಗಳಿಕೆಯ ಸಾಧನೆಗಳಾದರೂ ಏನು ?

ತಿಂಗಳಿಗೆ ಸರಾಸರಿ ರೂ 65 ಕ್ಕಿಂತ ಕಡಿಮೆ ಆದಾಯವಿದ್ದರೆ 'ಬಡತನದ ರೇಖೆ'ಗಿಂತ ಕೆಳಗಿರುವುದು ಎನ್ನುತ್ತಾರೆ. ಈ ಪ್ರಕಾರ ಬಡತನದಲ್ಲಿರುವವರ ಸಂಖ್ಯೆ 304 5 ಮಿಲಿಯ. ಇದರಲ್ಲಿ 252.7 ಮಿಲಿಯ ಹಳ್ಳಿಗಳಲ್ಲೂ 51.8 ಮಿಲಿಯ ನಗರಗಳಲ್ಲೂ ಇದ್ದಾರೆ. ವಿಶ್ವ ಬ್ಯಾಂಕ್ ವರದಿ ಪ್ರಕಾರ 1981ರಲ್ಲಿ ಹಸಿವಿನಿಂದ ನರಳುವವರ ಸಂಖ್ಯೆ 435 ಮಿಲಿಯ ವಿದ್ದು ಭಾರತದಲ್ಲಿ 304 ಮಿಲಿಯದಷ್ಟಿತ್ತು. ಭಾರತದ ಒಟ್ಟು ಜನಸಂಖ್ಯೆಯ ಸುಮಾರು ಅರ್ಧದಷ್ಟು ಜನತೆ ಹಸಿವಿನಿಂದ ಬಳಲುತ್ತಿದ್ದಾರೆ. ಅಂದ ಮೇಲೆ ಭಾರತ ಎಷ್ಟು ಸ್ವಾವಲಂಬನೆ ಸಾಧಿಸಿದೆ ? ನೋಂದಾವಣೆಯಾದ ನಿರುದ್ಯೋಗಿಗಳ ಸಂಖ್ಯೆ 17.4 ಮಿಲಿಯ ಗ್ರಾಮೀಣ ಪ್ರದೇಶಗಳಲ್ಲಿ ನೊಂದಾವಣೆ ಮಾಡಿಸದ ನಿರುದ್ಯೋಗಿಗಳ ಸಂಖ್ಯೆ ಲೆಕ್ಕಕ್ಕಿಲ್ಲ.

ಭಾರತದ ತಲಾ ಆದಾಯ 190 ಡಾಲರ್‌ಗಳಷ್ಟಿದೆ. 300 ಡಾಲರ್‌ಗಳಿಗೆ ಕಡಿಮೆ ಆದಾಯವಿರುವ ರಾಷ್ಟ್ರಗಳ ಪಟ್ಟಿಯ ಕೊನೆಯ 39 ರಾಷ್ಟ್ರಗಳಲ್ಲಿ ಭಾರತ ಒಂದಾಗಿದೆ.

'ಭಾರತದ ಒಂದು ವರ್ಷದ ಜನಸಂಖ್ಯೆಯ ಹೆಚ್ಚಳವನ್ನು ಮುಂದಿನ 50 ವರ್ಷಗಳಲ್ಲಿ ನಮ್ಮ ಕೈಗಾರಿಕೆಗಳು ತಡಕೊಳ್ಳಲು ಆಗುವುದಿಲ್ಲ' ಎಂದು ವರದಿಗಳೆನ್ನುತ್ತವೆ. ಸರಾಸರಿ ರಾಷ್ಟ್ರೀಯ ಉತ್ಪನ್ನದಲ್ಲಿ 40% ಇಳಿತಾಯವಾಗಿದೆ ವ್ಯವಸಾಯ ಉತ್ಪನ್ನದಲ್ಲೂ ಇಳಿಮುಖವಾಗಿದೆ. ವಿಶ್ವದ ಮಾರುಕಟ್ಟೆಯಲ್ಲೂ ನಮ್ಮ ಪಾತ್ರ ಕಿರಿದು. ಸ್ವಾತಂತ್ರ್ಯದ 35 ವರ್ಷಗಳ ನಂತರವೂ ಭಾರತದ ಸರಕಿನ ಶೇ. 98 (ಹಳ್ಳಿಗಳಲ್ಲಿ) ಮತ್ತು ಶೇ. 75 (ನಗರಗಳಲ್ಲಿ) ಎತ್ತಿನಗಾಡಿಗಳ ಮೂಲಕವೇ ಆಗುತ್ತಿದೆ.

ಸ್ವಾವಲಂಬೀ ಹಾಗೂ ಸ್ವತಂತ್ರ ಆರ್ಥಿಕತೆಯನ್ನು ಬೆಳೆಸುವುದು, ಕೃಷಿ ಸುಧಾರಣೆಗಳನ್ನು ತಂದು ವಿದೇಶೀ ಹಾಗೂ ಸ್ವದೇಶೀ ಏಕಸ್ವಾಮ್ಯವನ್ನು ಕೊನೆಗೊಳಿಸುವುದು ಇವೆಲ್ಲ ಕನಸಾಗಿಯೇ ಉಳಿದಿದೆ. ಈಗಿನ ಬೂರ್ಜ್ವಾ ಭೂಮಾಲೀಕ ಸರ್ಕಾರಕ್ಕೆ ಊಳಿಗಮಾನ್ಯ ಶಕ್ತಿಗಳನ್ನು ನಿವಾರಿಸುವುದಾಗಲೀ, ಏಕಸ್ವಾಮ್ಯ ಬಂಡವಾಳದ ಲೂಟಿಯನ್ನು ತಡೆಗಟ್ಟುವುದಾಗಲೀ ಆಗಿಲ್ಲ. ಭಾರತದ

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ:

ಅಭಾವ ಪರಿಸ್ಥಿತಿ— ತೀವ್ರಕ್ರಮ ಜಾರಿಯಾಗಲಿ

— ಎನ್ಕೆ

ರಾಜ್ಯ ಅಭಾವ ಪೀಡಿತವಾಗಿದೆಂದು ಜುಲೈ ತಿಂಗಳಲ್ಲೇ ಗುಲ್ಲು ಎದ್ದಿದೆಯಾದರೂ ಈ ಅಭಾವ ಪರಿಹಾರಕ್ಕೆ ರಾಜ್ಯ ಸರಕಾರ ಇದುವರೆಗೂ ಕೇಂದ್ರದ ನೆರವು ಕೇಳಿಲ್ಲ. ಅಭಾವ ಪರಿಹಾರ ಕಾರ್ಯಗಳಿಗೆ ಕೇಂದ್ರದ ನೆರವು ಅಗತ್ಯ. ಆದರೆ ಈಗಿನ ಸರಕಾರ ಇದುವರೆಗೆ ಪರಿಹಾರ ಕಾರ್ಯಕ್ಕೆ ನೆರವು ಕೇಳಿಕೆಯ ಮನವಿ ಪತ್ರ ಸಲ್ಲಿಸಿಲ್ಲೆಂದು ಕೇಂದ್ರದ ವ್ಯವಸಾಯ ಹಾಗೂ ಗ್ರಾಮಾಭಿವೃದ್ಧಿ ಇಲಾಖೆಯ ಉಪ ಸಚಿವೆ ಶ್ರೀಮತಿ ಕಮಲ ಕುಮಾರಿಯವರು ಕಾಂಗ್ರೆಸ್ ಕಾರ್ಯಕರ್ತ ಟಿ. ಎ. ಕೆಂಪೇಗೌಡ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಆದರೆ ಕಂದಾಯ ಮಂತ್ರಿ ಖರ್ಗೆಯವರ ಪ್ರಕಾರ ಈಗಾಗಲೇ ಎರಡೂವರೆ ಕೋಟಿ ರೂ. ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ.

ಹೋದ ತಿಂಗಳ ಕೊನೆ ವಾರದಲ್ಲಿ ಬೆಂಗಳೂರಿನ ಬಹುತೇಕ ದಿನ ಪತ್ರಿಕೆಗಳಲ್ಲಿ ಭಾರತ ದೇಶದ ಎಲ್ಲ ರಾಜ್ಯಗಳಲ್ಲಿ ಮಳೆ ಎಷ್ಟು ಬಿದ್ದಿದೆಯೆಂಬುದನ್ನು ತಿಳಿಸುವ ಚಿತ್ರ ಪ್ರಕಟವಾಗಿದೆ. ಅದರಲ್ಲಿ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಮಳೆ ಬಿದ್ದಿತೆಂದು ತೋರಿಸಿಕೊಡಲಾಗಿದೆ. ರಾಜ್ಯದ ಹತ್ತು ಜಿಲ್ಲೆಗಳಿಗೂ ಮೇಲ್ಪಟ್ಟ ಪ್ರದೇಶಕ್ಕೆ ಜೂನ್ ಪ್ರಾರಂಭದ ಮಳೆಯಲ್ಲದೆ ಬೇರೆ ಮಳೆಯೇ ಆಗಿಲ್ಲ. ಹೋದ ತಿಂಗಳು ಕೆಲವೆಡೆ ಉತ್ತಮ ಮಳೆಯಾಗಿದೆ. ಅನಂತರ ಮಳೆಯ ಸುಳಿವೇ ಇಲ್ಲ ಎಂಬ ಸಂಗತಿ ಎಲ್ಲರಿಗೂ ಗೊತ್ತು. ಮುಂಗಾರಿ ಬೆಳೆ ಸಂಪೂರ್ಣ ನಾಶವಾಗಿದೆ. ಹಿಂಗಾರಿ ಬೆಳೆಯ ಭವಿಷ್ಯ ಹೇಳುವುದು ಈಗಲೇ ಸಾಧ್ಯವಿಲ್ಲೆಂದೂ ತಿಳಿದಿದೆ.

ಕಂದಾಯ ಮಂತ್ರಿ ಖರ್ಗೆಯವರ ಹೇಳಿಕೆಯಂತೆಯೇ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೆಲವು ಭಾಗಗಳು ಅಭಾವ ಪೀಡಿತ. ಸರಕಾರಿ ಲೆಕ್ಕ ಪ್ರಕಾರ (ಇದು ಸರಿಯಲ್ಲ) 12 ಸಾವಿರ ಗ್ರಾಮಗಳು ಮಳೆಯಿಲ್ಲದೆ ಬವಣೆಯಲ್ಲಿವೆಯಂತೆ.

ಬರಗಾಲ ಪರಿಹಾರ ಕಾರ್ಯಕೈಗೊಳ್ಳಬೇಕೆಂಬಬೇಡಿಕೆ ಹೆಚ್ಚಿನ ತಾಲ್ಲೂಕು, ಹಳ್ಳಿಗಳಿಂದ ಬರುತ್ತಲೇ ಇದೆ. ಹಣದ ಅಭಾವವಿಲ್ಲೆಂಬ ಆಶ್ವಾಸನೆಯನ್ನು ಅರ್ಥಿಕ ಮಂತ್ರಿ ವೀರಪ್ಪ ಮೊಯಿಲಿ ಕೊಡುತ್ತಿದ್ದಾರೆ. ರಾಜ್ಯದ ನೀರಾವರಿ ಯೋಜನೆಗಳಿಗೂ ಹಣದ ಅಭಾವವಿಲ್ಲವೆಂದೂ ಹೇಳಿದ್ದಾರೆ.

ಹೀಗಿರುವಾಗ ಬರಗಾಲ ಕಾಮಗಾರಿಗಳು ಯಾಕೆ ಕೈಗೊಳ್ಳಲಾಗಿಲ್ಲ. ಹೆಚ್ಚು ಜನರಿಗೂ, ಕುಡಿಯುವ ನೀರಿಗೂ ಉಪಯೋಗವಾಗುವ ನೀರಾವರಿ ಯೋಜನೆಗಳು ಯಾಕೆ ಕುಂಟುತ್ತಾ ನಡೆದಿವೆ. ಇದಕ್ಕೆ ಸರಕಾರದ ಉತ್ತರವಿಲ್ಲ.

ಇದೇ ರೀತಿ ಮಳೆ ಕೈಕೊಟ್ಟದ್ದಾದರೆ ಇನ್ನೆರಡು ತಿಂಗಳಲ್ಲಿ ಕುಡಿಯುವ ನೀರಿಗೆ, ದನದ ಮೇವಿಗೆ, ಮನುಷ್ಯರ ಆಹಾರಕ್ಕೆ ಹಾಹಾಕಾರ ಏಳುವುದರಲ್ಲಿ ಸಂಶಯವಿಲ್ಲ. ಈ ಮುಂಚೆ ಕೂಡ ರಾಜ್ಯ ಸರಕಾರ ಮುಂಜಾಗ್ರತೆ ಕ್ರಮ ವಹಿಸಿಕೊಳ್ಳದೆ ಹಳ್ಳಿಯ ಜನರೆಲ್ಲ ಹೀನಾಯ ಪರಿಸ್ಥಿತಿಯನ್ನೆದುರಿಸಬೇಕಾಗಿ ಬಂದಿತ್ತು. ಈಗಿನ ಸರಕಾರ ಮಳೆರಾಯನಿಗಾಗಿ ಪೂಜೆ ಮಾಡುವ ಕ್ರಮಬಿಟ್ಟುಕೊಟ್ಟು, ವಾಸ್ತವಿಕ ಪರಿಸ್ಥಿತಿಯ ಅರಿವನ್ನು ತಿಳಿದುಕೊಂಡು, ಪರಿಸ್ಥಿತಿ ಕೈಮೀರಿ ಹೋಗುವ ಮುಂಚೆಯೇ ಸರಿಯಾದ ಕ್ರಮ ಕೈಗೊಳ್ಳುವುದಗತ್ಯ. ಬಂಡವಾಳಶಾಹಿ ಸರಕಾರ ಮತಗಳಿಕೆಗೋಸ್ಕರ ಪರಿಹಾರ ಕಾರ್ಯಗಳನ್ನೂ, ಅಭಿವೃದ್ಧಿ ಕೆಲಸಗಳನ್ನೂ ಕೈಗೊಳ್ಳುತ್ತದೆ. ಜನರ ಸರ್ವತೋಮುಖ ಹಿತಕ್ಕಾಗಿ ಅಲ್ಲ ಎಂಬ ವಿಷಯ 35 ವರ್ಷಗಳ ಕಾಂಗ್ರೆಸ್ ಸರಕಾರದಿಂದ ಮನದಟ್ಟಾಗಿದೆ.

ಆದ್ದರಿಂದ, ಪರಿಸ್ಥಿತಿ ಕೈಮೀರಿ ಹೋಗುವ ಮೊದಲೇ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಒತ್ತಾಯ ಮಾಡುವ ಜವಾಬ್ದಾರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘ ಹಾಗೆಯೇ ಇತರ ವಿರೋಧ ಪಕ್ಷಗಳ ಮೇಲೆ ಬಿದ್ದಿದೆ. ಈ ಜವಾಬ್ದಾರಿಯನ್ನು ಹೊತ್ತು ಬಲಿಷ್ಟವಾದ ಚಳುವಳಿ ಹೂಡಲು ವಿರೋಧ ಪಕ್ಷಗಳು ಮುಂದಾಗಬೇಕು.

●

ಪೂನಾ :

ಆರ್. ಎಂ. ಎಸ್. ಮತ್ತು ಎಂ. ಎಂ ಎಸ್. ನೌಕರರ ಅಖಿಲ ಭಾರತ ಸಮ್ಮೇಳನ

ನವೆಂಬರ್ 4 ರಿಂದ 7ರ ವರೆಗೆ ಪೂನಾದಲ್ಲಿ ಆರ್. ಎಂ. ಎಸ್. ಮತ್ತು ಎಂ. ಎಂ. ಎಸ್. ನೌಕರರ ಅಖಿಲ ಭಾರತ 16ನೇ ಸಮ್ಮೇಳನ ನಡೆಯಲಿದೆ. ಸಮ್ಮೇಳನವನ್ನು ಸಿ. ಐ. ಟಿ. ಯು. ಅಧ್ಯಕ್ಷ ಕಾಂ। ಬಿ. ಟಿ. ರಣದಿವೆ ಉದ್ಘಾಟಿಸಲಿದ್ದಾರೆ. ಸಮ್ಮೇಳನದಲ್ಲಿ ದೇಶದಾದ್ಯಂತದಿಂದ ಸುಮಾರು 2000 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ.

ಯುವಕ ಮಂಡಲದ ವಾರ್ಷಿಕೋತ್ಸವ

ಮಂಗಳೂರು ತಾಲ್ಲೂಕಿನ ಪಕ್ಕಲಡ್ಕ ಯುವಕ ಮಂಡಲದ 29ನೇ ವಾರ್ಷಿಕ ಮಹಾಸಭೆಯು 10-10-82 ರಂದು ಜರುಗಿತು. ಅಧ್ಯಕ್ಷತೆಯನ್ನು ಕೆ. ರಾಘವ ಅಂಚನ್‌ರವರು ವಹಿಸಿದ್ದರು.

ಆರಂಭದಲ್ಲಿ ಯುವಕ ಮಂಡಲದ ಕಾರ್ಯದರ್ಶಿ ಬಿ. ನಾರಾಯಣಶೆಟ್ಟಿಯವರು ಸ್ವಾಗತಿಸಿದರು ಕೆ. ಮಾಧವ ಅವರು ಲೆಕ್ಕ ಪತ್ರ ಮಂಡಿಸಿದರು.

ಸಭೆಯನ್ನುದ್ದೇಶಿಸಿ ಕೆ. ಸಂಜೀವ ಸುವರ್ಣ, ಸುಂದರ ಬಂಗೇರ, ಕೊರಗಪ್ಪ, ಶ್ರೀಧರ್, ಚೆನ್ನಪ್ಪ ಮತ್ತು ಬಿ. ಹರಿಶ್ಚಂದ್ರ ನಾಯಕ್ ಮೊದಲಾದವರು ಮಾತನಾಡಿದರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕೆ. ರಾಘವ ಅಂಚನ್, ಉಪಾಧ್ಯಕ್ಷರಾಗಿ ಲಕ್ಷ್ಮಣ ಕಾರ್ಪೆಂಟರ್, ಕಾರ್ಯದರ್ಶಿಯಾಗಿ ಬಿ. ನಾರಾಯಣಶೆಟ್ಟಿ, ಜೊತೆ ಕಾರ್ಯದರ್ಶಿಯಾಗಿ ಕೆ.ಗಿರೀಶ್ ಹಾಗೂ ಕೋಶಾಧಿಕಾರಿಯಾಗಿ ಕೆ. ಮಾಧವ, ಅಫೀಸ್ ಕಾರ್ಯದರ್ಶಿಯಾಗಿ ಬಿ. ಹರಿಶ್ಚಂದ್ರ ಇವರುಗಳು ಆಯ್ಕೆಯಾಗಿದ್ದಾರೆ.

●

ಮೂಲಭೂತ ಆಂತರಿಕ ಬದಲಾವಣೆ ಅಗತ್ಯ

(6ನೇ ಪುಟದಿಂದ)

ಪ್ರತಿಯೊಂದು ಸಮಸ್ಯೆಗೂ ವಿರೋಧ ಪಕ್ಷಗಳನ್ನು ಪ್ರಧಾನಿಯವರು ದೂರುತ್ತಾರೆ. ಆದರೆ ರಾಷ್ಟ್ರದ ಅರ್ಧದಷ್ಟು ಸಂಪತ್ತನ್ನು ಬರಿಯ ಮೂರರಷ್ಟು ಉದ್ಯಮ ಸಂಸ್ಥೆಗಳು ಪಡೆದಿವೆ ಎನ್ನುವುದರ ಬಗ್ಗೆ ಅವರು ಚಕಾರವೆತ್ತುವುದಿಲ್ಲ. ಭೂಮಾಲಿಕರು ಮತ್ತು ನರ ಏಜೆಂಟರುಗಳು ಪಂಚಾಯಿತಿ ಮಟ್ಟದಿಂದ ಹಿಡಿದು ವಿಧಾನ ಸಭೆ ಲೋಕಸಭೆಗಳವರೆಗೆ ತಮ್ಮ ಅಧಿಕಾರದ ಹಿಡಿತ ಸ್ಥಾಪಿಸಿದ್ದಾರೆ.

ಸೋವಿಯೆತ್ ನೆರವನ್ನು ಎಷ್ಟು ಹೆಚ್ಚಿಸಿದರೂ ಸಹ ಸ್ವಾವಲಂಬನೆಯನ್ನು ಸಾಧಿಸುವುದು ಮತ್ತು ಬಂಡವಾಳಶಾಹಿ ರಾಷ್ಟ್ರಗಳಿಂದ ಸಾಲ ಬೇಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ವಿದೇಶೀ ಬಂಡವಾಳದ, ಸಾಲದ ಮೇಲೆ ಹೆಚ್ಚೆಚ್ಚು ಅವಲಂಬಿತವಾಗುತ್ತಿದ್ದರೆ ಭಾರತದ ಸ್ವತಂತ್ರ, ಅಲಿಪ್ತ, ಶಾಂತಿಪ್ರಿಯತೆ ಹಾಗೂ ವಸಾಹತುಶಾಹಿ ವಿರೋಧಿ ಧೋರಣೆಯ ನೀತಿಯನ್ನು ಎಷ್ಟರ ಮಟ್ಟಿಗೆ ರಕ್ಷಿಸಿಕೊಂಡು ಮುನ್ನಡೆಯಬಹುದು ಎನ್ನುವುದು ಮುಖ್ಯ ವಿಷಯವಾಗಿದೆ.

ಕಾ॥ ಆರೋಕ್ಯದಾಸ್‌ರ ಕೊಲೆಯನ್ನು ಪ್ರತಿಭಟಿಸಿ ಮೆರವಣಿಗೆ, ಮತಪ್ರದರ್ಶನ

ವಿಧಾಯಕ ಕಾರ್ಯಕ್ರಮ ಹಾಗೂ ಪ್ರಾಮಾಣಿಕ ಪ್ರಯತ್ನದ ಅಭಾವದಿಂದ ಜನಬೆಂಬಲವನ್ನು ಪಡೆಯುವಲ್ಲಿ ವಿಫಲವಾದ ಕೆ. ಜಿ. ಎಫ್. ಶಾಸಕ ಆರ್ಮುಗಂ ನಂಥ ಕೆಲವು ದುಷ್ಟ ರಾಜಕೀಯ ಶಕ್ತಿಗಳು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಧಿಕ್ಕರಿಸಿ ಕಾನೂನನ್ನು ಕೈಗೆ ತೆಗೆದುಕೊಂಡು ಸಾಮಾಜಿಕ ಶಾಂತಿಗೆ ಭಂಗ ತರುತ್ತಿರುವುದರ ಸ್ಪಷ್ಟ ನಿದರ್ಶನವೇ ಸೆಪ್ಟೆಂಬರ್ 30 ರಂದು ಕೆ. ಜಿ. ಎಫ್. ನಲ್ಲಿ ನಡೆದ ಘಟನೆ. ಜನತೆಯ ಬೆಂಬಲ ಪಡೆಯುವಲ್ಲಿ ವಿಫಲನಾಗಿ ಆರ್ಮುಗಂನ ಹತಾಶ ಕೊಲೆ ರಾಜಕೀಯಕ್ಕೆ ಕಾಂ। ಆರೋಕ್ಯದಾಸ್ ಬಲಿಯಾಗಬೇಕಾಯಿತು.

ಈ ಕೊಲೆಯನ್ನು ಪ್ರತಿಭಟಿಸಿ ರಾಜ್ಯದ ನಾನಾ ಕಡೆ ನಡೆದಿರುವ ಮೆರವಣಿಗೆ, ಮತಪ್ರದರ್ಶನ ಮತ್ತು ಬಹಿರಂಗ ಸಭೆಗಳ ವಿವರವನ್ನು ಕಳೆದ ವಾರದ ಐಕ್ಯರಂಗದಲ್ಲಿ ಪ್ರಕಟಿಸಲಾಗಿತ್ತು. ಮತ್ತೆ ತಲುಪಿರುವ ಕೆಲವು ವಿವರಗಳನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.

ಮೂಡಿಗೆರೆ :

18-10-82 ರಂದು ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.)ನ ಆಶ್ರಯದಲ್ಲಿ ಕಾರ್ಮಿಕರು ಮೆರವಣಿಗೆ ಹೊರಡಿಸಿ ಕಾಂ। ಆರೋಕ್ಯದಾಸ್‌ರ ಕೊಲೆಗೆ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

ಸಂಘದ ಉಪಾಧ್ಯಕ್ಷ ಕಾಂ। ಎ. ಸಿ. ಕೇಶವ, ರಾಘವೇಂದ್ರ ಮತ್ತು ಎಸ್. ಪಿ. ಪ್ರಕಾಶ್ ಇವರ ನೇತೃತ್ವದ ನಿಯೋಗವೊಂದು ತಹಶೀಲ್ದಾರರ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿತು. ನಂತರ ತಹಶೀಲ್ದಾರರ ಕಚೇರಿ ಎದುರು ಬಹಿರಂಗ ಸಭೆ ನಡೆಯಿತು.

ಗುಲ್ಬರ್ಗಾ :

ಕೆ. ಜಿ. ಎಫ್. ಘಟನೆಯನ್ನು ಸಿ. ಪಿ. ಐ. (ಎಂ) ಜಿಲ್ಲಾ ಘಟಕ ತೀವ್ರವಾಗಿ ಖಂಡಿಸಿ, ಕೊಲೆಪಾತಕರನ್ನು ಶಿಕ್ಷಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗೆ ಜಿಲ್ಲಾಧಿಕಾರಿಯ ಮೂಲಕ ಮನವಿ ಸಲ್ಲಿಸಲಾಯಿತು.

ಗುಲ್ಬರ್ಗದ ಎಂ.ಎಸ್.ಕೆ. ಮಿಲ್ಸ್ ಮತ್ತು ಶಹಾಬಾದ್‌ನ ಎ. ಬಿ. ಎಲ್. ಫ್ಯಾಕ್ಟರಿಗಳೆದುರು ಬಹಿರಂಗ ಸಭೆ ನಡೆದು ಕೊಲೆ ಘಟನೆಯನ್ನು ಖಂಡಿಸಲಾಯಿತು.

ದಾಂಡೇಲಿ :

ಸಿ.ಐ.ಟಿ.ಯು. ಮತ್ತು ಸಿ.ಪಿ.ಐ. (ಎಂ) ರಾಜ್ಯ ಸಮಿತಿಗಳ ಕರೆಯ ಮೇರೆಗೆ ದಾಂಡೇಲಿಯಲ್ಲಿ ಕಾಂ। ಆರೋಕ್ಯದಾಸ್ ಅವರ ಕೊಲೆಯನ್ನು ಪ್ರತಿಭಟಿಸಿ ಬಹಿರಂಗ ಸಭೆ ನಡೆಸಲಾಯಿತು.

ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಕಾರ್ಮಿಕರ ಸಂಘದ ಕಚೇರಿಯ ಅವರಣದಲ್ಲಿ ನಡೆದ ಸಭೆಯಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್, ಪ್ಲೈವುಡ್ ಕಾರ್ಖಾನೆ, ದಾಂಡೇಲಿ ಫೆರ್ರೊ ಅಲಾಯ್ಸ್‌ನ ಕಾರ್ಮಿಕ ಬಾಂಧವರು ಪಾಲ್ಗೊಂಡಿದ್ದರು.

ಆರಂಭದಲ್ಲಿ ಸುರಿಯುತ್ತಿದ್ದ ಮಳೆಯಲ್ಲೇ ಮೆರವಣಿಗೆ ಹೊರಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ। ಮಂಜುನಾಥ ಪುಲಕರ, ಪೇಪರ್ ಮಿಲ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಕಾಂ। ಉಮೇಶ್ ನಾಯ್ಕ, ಸಹ ಕಾರ್ಯದರ್ಶಿ

(8ನೇ ಪುಟ ನೋಡಿ)

ಬೆಂಗಳೂರು :

ಬೆಲೆ ಏರಿಕೆಯನ್ನು ಪ್ರತಿಭಟಿಸಿ, ದಿನಬಳಕೆ ವಸ್ತುಗಳ ಸೂಕ್ತ ವಿತರಣೆಗೆ ಒತ್ತಾಯಿಸಿ ಮೆರವಣಿಗೆ

ಬೆಲೆ ಏರಿಕೆಯನ್ನು ಪ್ರತಿಭಟಿಸಿ, ದಿನಬಳಕೆ ವಸ್ತುಗಳ ಸೂಕ್ತ ವಿತರಣೆಗೆ ಒತ್ತಾಯಿಸಿ 23-10-82 ರಂದು ಸಿ.ಪಿ.ಐ. (ಎಂ) ಶ್ರೀರಾಂಪುರ ಸ್ಥಳೀಯ ಸಮಿತಿಯ ಆಶ್ರಯದಲ್ಲಿ ಗ್ರಾಹಕರು ಮೆರವಣಿಗೆ ನಡೆಸಿ, ಬೆಂಗಳೂರು ನಗರದ ಉತ್ತರ ವಲಯದ ರೇಂಜ್ ಕಚೇರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸೀಮೆ ಎಣ್ಣೆ ಸಿಗದೆ ಬಳಕೆದಾರರು ಖಾಲಿ ಡಬ್ಬ ಹಿಡಿದು ಪರದಾಡುವ ದೃಶ್ಯ ಎಲ್ಲೆಡೆ ಸಾಮಾನ್ಯ. ತಮ್ಮ ಪಡಿತರ (ರೇಷನ್) ಪಡೆಯಲು ಅನುಭವಿಸುತ್ತಿರುವ ಕಷ್ಟ ಹೇಳಲಸಾಧ್ಯ. ಗ್ರಾಹಕರ ಬವಣೆನೀಗಿಸಲು, ಶ್ರಮಿಸಲು ಮುಂದಾಗಿರುವ ಶ್ರೀರಾಂಪುರದ ಸ್ಥಳೀಯ ಸಮಿತಿಯ ಕಾರ್ಯ ಸ್ತುತ್ಯಾರ್ಹ.

ಘೋಷಣೆಗಳನ್ನು ಕೂಗುತ್ತಾ ಶ್ರೀರಾಂಪುರದಿಂದ ಮೆರವಣಿಗೆ ನಡೆಸಿ ಸರಬರಾಜು ಇಲಾಖೆಯ ಎದುರು ಧರಣಿ ಕುಳಿತರು. ರೇಂಜ್ ಅಧಿಕಾರಿಗಳು ಧರಣಿ ಕುಳಿತವರ ಬಳಿ ಬಂದು ಮನವಿ ಸ್ವೀಕರಿಸಿದರು. ಕಾರ್ಯಕ್ರಮದ ನೇತೃತ್ವವನ್ನು ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ। ಎ. ವಿ. ರಮೇಶ್ ಮತ್ತು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಪಿ. ಕೆ. ಸುಬ್ರಮಣಿ ವಹಿಸಿದ್ದರು.

○

ಲಕ್ಷಾಂತರ ಜನತೆ ಬೇಗುದಿಯಲ್ಲಿ

(1ನೇ ಪುಟದಿಂದ)

ಜೂನ್‌ನಲ್ಲಿ ನಡೆದ ಚಂಡಮಾರುತದಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ ಕಳೆದ ಆಗಸ್ಟ್‌ನಲ್ಲಿ ಭೀಕರ ಪ್ರವಾಹದಿಂದಾಗಿ ರಾಜ್ಯದ ಎಂಟು ಜಿಲ್ಲೆಗಳ ಒಟ್ಟು 90,000 ಸ್ಕ್ವೇರ್ ಕಿ.ಮೀ. ಪ್ರದೇಶ ಹಾನಿಗೀಡಾಗಿದೆ, 9300 ಹಳ್ಳಿಗಳು ತೊಂದರೆಗೊಳಗಾಗಿವೆ. ಈ ಪ್ರವಾಹದ ನಂತರ ಇಲ್ಲಿಯವರೆಗೆ ಮಳೆಯ ಲಕ್ಷಣಗಳಿಲ್ಲ. ಕರಾವಳಿ ಪ್ರದೇಶದ ಜನತೆ ವಲಸೆ ಹೋಗುತ್ತಿದ್ದಾರೆ. ತಮ್ಮ ಜಾನುವಾರನ್ನು ಮಾರಿಕೊಳ್ಳುವ ಪರಿಸ್ಥಿತಿ ಬಂದೊದಗಿದೆ.

ಪ್ರವಾಹ, ಚಂಡಮಾರುತದಿಂದಾಗಿ ಮನೆ-ಮಾರು ಕಳೆದುಕೊಂಡವರಿಗೆ ಸರಕಾರ 100 ರೂ. ಸಹಾಯ ಧನ ನೀಡುತ್ತಿದೆ. (ರೂ. 500 ಎಂದು ಘೋಷಿಸಲಾಗಿತ್ತು).

ಮಹಾರಾಷ್ಟ್ರ :

ರಾಜ್ಯದ 30 ಜಿಲ್ಲೆಗಳ ಪೈಕಿ 20 ಜಿಲ್ಲೆಗಳು ಕ್ಷಾಮ ಪೀಡಿತವಾಗಿವೆ, ಮುಂಗಾರು ಬೆಳೆ ಶೇ. 30 ಹಾಳಾಗಿದೆ. 154 ಲಕ್ಷ ಹೆಕ್ಟಾರ್ ಪೈಕಿ 80 ಲಕ್ಷ ಹೆಕ್ಟಾರು ಭೂಮಿಯಲ್ಲಿ ಮುಂಗಾರು ಬೆಳೆಯನ್ನು ನಿರೀಕ್ಷಿಸಲಾಗಿದೆ. ಜನತೆ ಕುಡಿಯುವ ನೀರಿಲ್ಲದೇ ಬಳಲುತ್ತಿದೆ. ದನಗಳಿಗೆ ಮೇವಿಲ್ಲದೇ ಪರಿಸ್ಥಿತಿ ಗಂಭೀರವಾಗಿದೆ.

ತಮಿಳುನಾಡು :

ಕಳೆದ ಎರಡು ದಶಕಗಳಿಂದೀಚೆಗೆ ಕಾಣದಿದ್ದ ಭೀಕರ ಪರಿಸ್ಥಿತಿಯನ್ನು ರಾಜ್ಯ ಎದುರಿಸುತ್ತಿದೆ. ಮಾಮೂಲಿ ಮಳೆಗಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಳೆ ಬಿದ್ದಿದೆ. ಕೆರೆ, ಕೊಳ, ಭಾವಿ, ಕಾಲುವೆಗಳು ಒಣಗಿ ಹೋಗಿವೆ. ಆಹಾರ ಧಾನ್ಯಗಳ ಬೆಳೆ ಸಂಪೂರ್ಣ ಹಾಳಾಗುವ ಭೀತಿ ಬಂದೊದಗಿದೆ. ಕುಡಿಯುವ ನೀರಿನ ಬವಣೆ ಹೇಳತೀರದು.

ಆಂಧ್ರ ಪ್ರದೇಶ :

ಅಧಿಕೃತ ಮೂಲದ ಪ್ರಕಾರ 5 ಲಕ್ಷ ಸಣ್ಣ ರೈತರು, ಆರು ಲಕ್ಷ ಅತಿ ಕೃಷಿಕರು ಮತ್ತು 20 ಲಕ್ಷ ಕೃಷಿ ಕಾರ್ಮಿಕರು ಬವಣೆಗೆ ಸಿಲುಕಿದ್ದಾರೆ. ಹತ್ತು ಜಿಲ್ಲೆಗಳನ್ನು ಕ್ಷಾಮ ಪೀಡಿತ ಎಂದು ಸಾರಲಾಗಿದೆ. 605 ಕೋಟಿ ರೂ. ಬೆಲೆ ಬಾಳುವ ಸುಮಾರು 52 ಲಕ್ಷ ಟನ್ ಆಹಾರ ಧಾನ್ಯ ನಾಶವಾಗಿದೆ.

ರಾಜ್ಯದ ಸಾವಿರಾರು ಕೃಷಿ ಕಾರ್ಮಿಕರು ಕೆಲಸಕ್ಕಾಗಿ ಪರದಾಡುತ್ತಿದ್ದಾರೆ.

ಬಿಹಾರ :

ಬರಗಾಲ ಪರಿಸ್ಥಿತಿ ಮಾಮೂಲಿಯಾಗಿರುವ ಈ ರಾಜ್ಯದಲ್ಲಿ ಈ ವರ್ಷ ವಂತೂ ಪರಿಸ್ಥಿತಿ ತುಂಬ ಗಂಭೀರವಾಗಿದೆ. ಇತ್ತೀಚಿನ ಪ್ರವಾಹದ ಸಂದರ್ಭದಲ್ಲಿ ಒಟ್ಟು 33 ಜಿಲ್ಲೆಗಳ ಪೈಕಿ 14 ಜಿಲ್ಲೆಗಳು ತೊಂದರೆಗೊಳಗಾಗಿದ್ದವು. 3000 ಹಳ್ಳಿಗಳು ಹೆಚ್ಚು ಕಡಿಮೆ ಸಮೂಲ ನಾಶವಾಗಿವೆ. ಉತ್ತರ ಬಿಹಾರಿನಲ್ಲೂ ಇದೇ ಪರಿಸ್ಥಿತಿ. ಸಕಾಲಕ್ಕೆ ಮಳೆಬಾರದ್ದರಿಂದ ಆಹಾರ ಧಾನ್ಯಗಳ ಬೆಳೆ ಹಾಳಾಗಿದೆ. ಬಹಿರಂಗ ಮಾರುಕಟ್ಟೆಯಲ್ಲಿ ಆಹಾರ ಧಾನ್ಯ ದೊರೆಯುವುದೇ ದುಸ್ತರವಾಗಿದೆ. ಸಂದರ್ಭದ ದುರುಪಯೋಗವನ್ನು ಕಾಳಸಂತೆಖೋರರು ಪಡೆಯುತ್ತಿದ್ದಾರೆ. ಸಾಧಾರಣ ಗೋಧಿಯ ಬೆಳೆ ಕ್ವಿಂಟಾಲ್‌ಗೆ 193 ರೂ. (ಏಪ್ರಿಲ್‌ನಲ್ಲಿ) ಇದ್ದುದು ಈಗ ಕ್ವಿಂಟಾಲ್ ಒಂದಕ್ಕೆ 270 ರೂ. ಅಕ್ಕಿಯ ಬೆಲೆ 266 ರೂ. (ಕ್ವಿಂಟಾಲ್‌ಗೆ) ಇದ್ದುದು ಈಗ ರೂ. 360.

ಸಂತಾಲ ಪರಗಣಾ, ಛೋಟಾ ನಾಗಪುರ—ಈ ಪ್ರದೇಶಗಳಲ್ಲಿ ಹಸಿವಿನಿಂದಾಗಿ ಸುಮಾರು 100 ಜನ ಸತ್ತಿರುವುದಾಗಿ ತಿಳಿದು ಬಂದಿದೆ. 1967ರ ನಂತರದ ಅವಧಿಯಲ್ಲಿ ಈ ವರ್ಷದಲ್ಲಿ ಪರಿಸ್ಥಿತಿ ತುಂಬ ವಿಷಮ. ರಾಜ್ಯದ ಶೇ. 70 ಜನತೆ ತೊಂದರೆಗೆ ಸಿಲುಕಿದೆ

ಪ. ಬಂಗಾಲ :

ರಾಜ್ಯದ ಬಹುಭಾಗ ಕ್ಷಾಮ ಪೀಡಿತವಾಗಿದೆ. 1978ರ ಭೀಕರ ಪ್ರವಾಹದ ನೆನಪು ಜನಮನದಿಂದ ಇನ್ನೂ ಅಳಿಸಿಲ್ಲ. 1979ರಲ್ಲಿ ಮತ್ತೆ ಬರಗಾಲದಿಂದಾಗಿ ಪರಿಸ್ಥಿತಿ ವಿಷಮವಾಗಿತ್ತು. ಸಾವಿರಾರು ಏಕರೆ ಜಮೀನುಗಳಲ್ಲಿ ಪೈರು ಕೈಗೆಟಕದಂತಾಗಿದೆ ಬಹುತೇಕ ಜಿಲ್ಲೆಗಳು ಕ್ಷಾಮ ಪೀಡಿತವಾಗಿವೆ.

ನೀರಾವರಿ ಯೋಜನೆಗಳಿಂದಾಗಿ ಪ. ಬಂಗಾಲದ ಒಟ್ಟು ಭೂಮಿಯಲ್ಲಿ ಶೇ. 30 ರಷ್ಟು ಭಾಗಕ್ಕೆ ಮಾತ್ರ ನೀರು ಸರಬರಾಜು ಮಾಡಲು ಸಾಧ್ಯ. ಮಳೆ ಇಲ್ಲದಿರುವುದು ಹಾಗೂ ತಡವಾಗಿ ಬಂದುದರಿಂದ ಈಗಾಗಲೇ ಶೇ. 10 ರಷ್ಟು ಬೆಳೆ ನಷ್ಟವಾಗಿದೆ.

ಈ ಪರಿಸ್ಥಿತಿಯಿಂದಾಗಿ ಧಾನ್ಯ ಸರಬರಾಜಿನ ಪರಿಸ್ಥಿತಿಯೂ ಹದಗೆಟ್ಟಿದೆ. ರಾಜ್ಯಕ್ಕೆ ತಿಂಗಳಿಗೆ 1.75 ಲಕ್ಷ ಟನ್ ಆಹಾರ ಧಾನ್ಯಗಳು ಬೇಕು. ಕೇಂದ್ರದ ಪಕ್ಷಪಾತ ನೀತಿಯಿಂದಾಗಿ ಈ ಪ್ರಮಾಣ ಅರ್ಧದಷ್ಟು ಭಾಗವನ್ನೂ ಕೇಂದ್ರದಿಂದ ಸಮರ್ಪಕವಾಗಿ ದೊರಕುತ್ತಿಲ್ಲ.

ಪಡಿತರಕ್ಕಾಗಿ ಎಫ್.ಸಿ.ಐ.ನಿಂದ ದೊರಕುತ್ತಿರುವ ಹುಳಬಿದ್ದ ಅಕ್ಕಿ ಮನುಷ್ಯರು ತಿನ್ನಲಿಕ್ಕೆ ಯೋಗ್ಯವಾದುದಲ್ಲ. ದಾಸ್ತಾನು ಇಲ್ಲದ್ದರಿಂದ ಕಾರ್ಡುದಾರರಿಗೆ ಪಡಿತರ ಒದಗಿಸಲಾಗುತ್ತಿಲ್ಲ.

ಪ. ಬಂಗಾಲದ ಮುಖ್ಯ ಮಂತ್ರಿ ಜ್ಯೋತಿಬಸು ಅವರು ಕೇಂದ್ರಕ್ಕೆ ತುರ್ತು ಪತ್ರವೊಂದನ್ನು ಬರೆದು ಧಾನ್ಯ ಪೂರೈಸಲು ವಿನಂತಿಸಿದ್ದಾರೆ. ಬಿಹಾರಿನ ತೆನುಘಾಟ್ ಡ್ಯಾಮ್‌ನಿಂದ ನೀರನ್ನು ಪೂರೈಸಿದರೆ ಸುಮಾರು 100 ಕೋಟಿ ರೂ.ಗಳಷ್ಟು ಬೆಲೆಯ ಬೆಳೆಯನ್ನು ಉಳಿಸಲು ಸಾಧ್ಯವಿದೆ ಎಂದವರು ತಿಳಿಸಿದ್ದಾರೆ (ಬಿಹಾರ್ ಸರಕಾರ ನೀರು ಬಿಡಲು ಒಪ್ಪಿಗೆ ನೀಡಿಲ್ಲ).

○

ಪ್ರತಿಭಟನಾ ದಿನ

(1ನೇ ಪುಟದಿಂದ)

ನವೆಂಬರ್ 8 ರಂದು ಮತಪ್ರದರ್ಶನ ನಡೆಸುವದು, ಬ್ಯಾಡ್ಜುಗಳನ್ನು ಧರಿಸುವದು, ಧರಣಾ ಕೈಗೊಳ್ಳುವದು ಇತ್ಯಾದಿ ಕಾರ್ಯಕ್ರಮ ನಡೆಸಲು ಸಮ್ಮೇಳನ ಕರೆನೀಡಿದೆ.

ಬೇಡಿಕೆಗಳು (1) ಎಲ್ಲ ವೇತನ ಒಪ್ಪಂದಗಳು ಕಳೆದ ಒಪ್ಪಂದದ ಅವಧಿ ಮುಗಿದೊಡನೇ ಜಾರಿಯಾಗಬೇಕು ;

(2) ಸಂಬಳ ಹೆಚ್ಚಳದ ಶೇ|| 10ರ ಮಿತಿಯನ್ನು ತೆಗೆದುಹಾಕಿರಿ ಮತ್ತು ಸಾಮೂಹಿಕ ಚೌಕಾಶಿಯ ಮೂಲಕ ಸೂಕ್ತ ಒಪ್ಪಂದಕ್ಕೆ ಅವಕಾಶ ಮಾಡಿಕೊಡಿರಿ.

(3) ತಲಾ ಬೆಲೆ ಸೂಚ್ಯಾಂಕಕ್ಕೆ ರೂ. 1-30 ತುಟ್ಟಿಭತ್ತೆಯ ನೀತಿಯನ್ನು ಬಿಟ್ಟುಕೊಟ್ಟು, ಬೆಲೆ ಏರಿಕೆಯ ಆಧಾರದಲ್ಲಿ ಸೂಕ್ತವಾಗಿ ನಿಗದಿಪಡಿಸಬೇಕು.

(4) ಸಂಬಳದ ಒಪ್ಪಂದದಲ್ಲಿ, 'ಉತ್ಪಾದನೆಗೆ ಆಧಾರಿತ' ಎಂಬ ವಾದವನ್ನು ಕೈಬಿಡಬೇಕು.

(5) ಹೊಸದಾಗಿ ಕೆಲಸಕ್ಕೆ ಸೇರಿರುವವರಿಗೆ ಕಡಿಮೆ ಸಂಬಳದ ಕಾನೂನು ಕೈಬಿಡಬೇಕು.

(6) ಬಿ ಪಿ ಇ ಯನ್ನು ಕಿತ್ತೊಗೆಯಿರಿ.

(7) ಎಲ್ಲಾ ಕಾರ್ಮಿಕ ವಿರೋಧಿ ಕಾನೂನುಗಳು ವಾಪಸ್ಸಾಗಲಿ.

(7ನೇ ಪುಟದಿಂದ)

ಕಾಂ| ಟಿ. ಟಿ. ನಾಯ್ಕ ಇವರುಗಳು ಮಾತನಾಡಿ ಕೊಲೆಗಡುಕರನ್ನು ಶಿಕ್ಷಿಸುವಂತೆ ಒತ್ತಾಯಿಸಿದರು.

ಹೊಸಪೇಟೆ :

30–9–82 ರಂದು ಕೆ. ಜಿ. ಎಫ್. ನಲ್ಲಿ ಶಾಸಕ ಅರ್ಮುಗಂನ ಗೂಂಡಾಗಳು ಸಿ.ಐ.ಟಿ.ಯು. ಕಾರ್ಯಕರ್ತ ಕಾಂ| ಆರೋಕ್ಯದಾಸ್ ಅವರನ್ನು ಕೊಲೆ ಮಾಡಿರುವುದನ್ನು ಡಿ. ವೈ. ಎಫ್. ಐ. ಸ್ಥಳೀಯ ಘಟಕ ತೀವ್ರವಾಗಿ ಖಂಡಿಸಿದೆ.

19–10–82 ರಂದು ಕಾಂ| ರಾಮಚಂದ್ರ ನಾವಡ ಅವರ ನೇತೃತ್ವದಲ್ಲಿ ನಿಯೋಗವೊಂದು ಅಸಿಸ್ಟೆಂಟ್ ಕಮೀಶನರರ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿತು. ಪೋಲಿಸರ ಪಕ್ಷಪಾತತನದ ವರ್ತನೆಯನ್ನು ಖಂಡಿಸಿ ಪೋಲಿಸ್ ಅಧಿಕಾರಿಗಳಿಗೂ ಮನವಿ ಸಲ್ಲಿಸಲಾಯಿತು.

ಎಸ್. ಎಫ್. ಐ. ಬೆಂಗಳೂರು ಜಿಲ್ಲಾ ಘಟಕದ ಪ್ರಥಮ ಸಮ್ಮೇಳನ

ಎಸ್. ಎಫ್. ಐ. ನ ಬೆಂಗಳೂರು ಜಿಲ್ಲಾ ಮಟ್ಟದ ಪ್ರಥಮ ಸಮ್ಮೇಳನ ದೊಡ್ಡಬಳ್ಳಾಪುರದಲ್ಲಿ ಅಕ್ಟೋಬರ್ 24, 25 ರಂದು ಯಶಸ್ವಿಯಾಗಿ ನಡೆಯಿತು. ಸಮ್ಮೇಳನವನ್ನು ಬಂಡಾಯ ಸಾಹಿತಿ ಶ್ರೀ ಅಶ್ವಥರೆಡ್ಡಿಯವರು ಉದ್ಘಾಟಿಸಿದರು. ಸಮ್ಮೇಳನದಲ್ಲಿ ಬೆಂಗಳೂರು ನಗರ, ಹೊಸಕೋಟೆ. ಚನ್ನಪಟ್ಟಣ, ನೆಲಮಂಗಲ ಹಾಗೂ ದೊಡ್ಡಬಳ್ಳಾಪುರದಿಂದ ಒಟ್ಟು 69 ಪ್ರತಿನಿಧಿಗಳು ಭಾಗವಹಿಸಿದ್ದರು.

ಜಿಲ್ಲಾ ಸಮಿತಿ ಸಂಚಾಲಕ ಕಾಂ| ಎನ್. ರಾಜಣ್ಣ ಅವರು ಮಂಡಿಸಿದ ವರದಿಯ ಮೇಲೆ ಸುಧೀರ್ಘ ಚರ್ಚೆ ನಡೆಸಲಾಯಿತು. ವರದಿ ಅಂಗೀಕಾರವಾಯಿತು.

ದಿನಾಂಕ 25 ರಂದು ಸಮ್ಮೇಳನದ ಅಂಗವಾಗಿ ದೊಡ್ಡಬಳ್ಳಾಪುರದಲ್ಲಿ ವಿದ್ಯಾರ್ಥಿಗಳ ಮೆರವಣಿಗೆ, ಪುರಭವನದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಶ್ರೀ ಜಿ. ಕೆ. ಗೋವಿಂದರಾವ್ (ಬೆಂಗಳೂರು ವಿ. ವಿ. ಅಧ್ಯಾಪಕರ ಸಂಘದ ಅಧ್ಯಕ್ಷರು), ಬಂಡಾಯ ಸಾಹಿತಿ ಎಲ್. ಹನುಮಂತಯ್ಯ, ಎಸ್. ಎಫ್. ಐ. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ| ಎಸ್. ಆರ್. ಆರಾಧ್ಯ ಅವರುಗಳು ಮಾತನಾಡಿದರು.

ನೂತನ ಜಿಲ್ಲಾ ಸಮಿತಿಗೆ ಈ ಕೆಳಕಂಡವರನ್ನು ಚುನಾಯಿಸಲಾಗಿದೆ.

ಅಧ್ಯಕ್ಷರಾಗಿ ಡಿ. ಶಿವಶಂಕರ್ (ಬೆಂಗಳೂರು), ಕಾರ್ಯದರ್ಶಿಯಾಗಿ ಎನ್. ರಾಜಣ್ಣ (ಬೆಂಗಳೂರು), ಉಪಾಧ್ಯಕ್ಷರುಗಳಾಗಿ ಚಂದ್ರಶೇಖರಸ್ವಿ (ದೊಡ್ಡಬಳ್ಳಾಪುರ) ಮತ್ತು ಸುಬ್ಬಾರೆಡ್ಡಿ (ಬೆಂಗಳೂರು), ಸಹ ಕಾರ್ಯದರ್ಶಿಗಳಾಗಿ ಶ್ರೀಧರ ಮೂರ್ತಿ (ಬೆಂಗಳೂರು) ಮತ್ತು ಭದ್ರಯ್ಯ (ಚನ್ನಪಟ್ಟಣ), ಖಜಾಂಚಿಯಾಗಿ ನಾರಾಯಣಸ್ವಾಮಿ (ಹೊಸಕೋಟೆ). ಹಾಗೂ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕಾಂ| ಕೃಷ್ಣಮೂರ್ತಿ (ದೊಡ್ಡಬಳ್ಳಾಪುರ) ಇವರನ್ನೊಳಗೊಂಡು 31 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಡೊನೇಷನ್, ಕ್ಯಾಪಿಟೇಷನ್ ಪದ್ಧತಿಯನ್ನು ರದ್ದುಗೊಳಿಸಬೇಕು; ಮಾತೃ ಭಾಷೆ ಮಾಧ್ಯಮದಲ್ಲಿ ಉನ್ನತ ಮಟ್ಟದವರೆಗೂ ಶಿಕ್ಷಣ ನೀಡಬೇಕು; ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಬೇಕು; ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ ಇರುವುದರಿಂದ ಈ ಶೈಕ್ಷಣಿಕ ವರ್ಷದ 2ನೇ ಅವಧಿಯ ಶಿಕ್ಷಣ ಶುಲ್ಕ, ಪರೀಕ್ಷಾ ಶುಲ್ಕವನ್ನು ರದ್ದುಗೊಳಿಸಬೇಕು....ಎಂಬ ಇತ್ಯಾದಿ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ವಿದ್ಯಾರ್ಥಿಗಳ ಬೇಡಿಕೆಗಳು ಹಾಗೂ ಕೆಲವು ಸ್ಥಳೀಯ ಬೇಡಿಕೆಗಳಿಗಾಗಿ ಒತ್ತಾಯಿಸಿ ನವೆಂಬರ್ 10 ರಂದು ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಜಿಲ್ಲಾಧಿಕಾರಿ ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲು ಸಮ್ಮೇಳನ ಕರೆ ನೀಡಿದೆ.

○

ಶಿಡ್ಲಘಟ್ಟ :

ರೈತ ಸಂಘದ ಆಶ್ರಯದಲ್ಲಿ ಧರಣಿ ಸತ್ಯಾಗ್ರಹ

ಭೀಕರ ಕ್ಷಾಮದಿಂದ ಬಳಲುತ್ತಿರುವ ಜಿಲ್ಲೆಯನ್ನು 'ಕ್ಷಾಮ ಪೀಡಿತ ಪ್ರದೇಶ' ವೆಂದು ಸಾರಬೇಕು ಕೂಡಲೇ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು; ಶಿಡ್ಲಘಟ್ಟ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಜನತೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು; ಸರ್ಕಾರಿ ಬಂಜರು ಭೂಮಿಗಳಲ್ಲಿ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವವರಿಗೆ ಸದರಿ ಜಮೀನುಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿ 18-10-82 ರಂದು ರೈತ ಸಂಘದ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಶಿಡ್ಲಘಟ್ಟ ತಾಲ್ಲೂಕು ಕಚೇರಿಯ ಎದುರು ಧರಣಿ ಸತ್ಯಾಗ್ರಹ ನಡೆಯಿತು.

ಕಾಂ| ಕೆ.ಎಂ. ವೆಂಕಟೇಶ್, ಜಿ ಡಿ. ದೊರೆಸ್ವಾಮಿ, ಎನ್. ಮಣಿ, ಕೆ. ಸಿ ವೆಂಕಟೇಶ್ ಹಾಗೂ ಕಾಂ| ಮುನಿಕೃಷ್ಣಪ್ಪನವರ ನೇತೃತ್ವದಲ್ಲಿ ನಿಯೋಗವೊಂದು ಮೇಲ್ಕಂಡ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಮುಖ್ಯ ಮಂತ್ರಿಗಳಿಗೆ ತಹಶೀಲ್ದಾರರ ಮೂಲಕ ತಲುಪಿಸಲಾಯಿತು.

ನಂತರ ಮೆರವಣಿಗೆ ಹೊರಡಿಸಿ, ಬಹಿರಂಗ ಸಭೆ ನಡೆಸಲಾಯಿತು. ಇತ್ತೀಚೆಗೆ ಕೆ. ಜಿ. ಎಫ್. ನಲ್ಲಿ ಅರ್ಮುಗಂ ಗೂಂಡಾಗಳು ಸಿ ಐ ಟಿ.ಯು. ಕಾರ್ಯಕರ್ತ ಕಾಂ| ಆರೋಕ್ಯದಾಸ್ ಅವರನ್ನು ಕೊಲೆ ನಡೆಸಿರುವುದನ್ನು ಖಂಡಿಸುವ ನಿರ್ಣಯವೊಂದನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

●

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M, K. BHAT.